ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 19 | ಮೇ 11, 1980 | ಬೆಲೆ : 50 ಪೈಸೆ

'ಕರಾಳ' ಶಾಸನ

ಅಗತ್ಯ ಸಂಸ್ಥೆಗಳೆಂದು ಪರಿಗಣಿಸಲಾದ ವಿದ್ಯುಚ್ಛಕ್ತಿ ಮಂಡಳಿ, ಸಾರಿಗೆ ಕಾರ್ಪೊರೇಷನ್, ಹಾಲು ಸರಬರಾಜು ಮಾಡುವ ಡೈರಿ, ಆಟೋರಿಕ್ಷಾ ಮುಂತಾದುವುಗಳಲ್ಲಿ ಅನಿರೀಕ್ಷಿತ ಮುಷ್ಕರಗಳನ್ನು ನಿಷೇಧಿಸಲು ಉದ್ದೇಶಿಸಿರುವ ಅಗತ್ಯ ಸೇವಾ ಸಂಸ್ಥೆಗಳ ನಿರ್ವಹಣೆ ವಿಧೇಯಕವು ಈ ವಾರ ಶಾಸನ ಸಭೆಯಲ್ಲಿ ಬಿಸಿಬಿಸಿ ಚರ್ಚೆಗೆ ಬಂದು ವಿರೋಧಪಕ್ಷಗಳ ಒತ್ತಾಯದಿಂದ ಜಂಟಿ ಸೆಲೆಕ್ಟ್ ಕಮಿಟಿಗೆ ಹೋಗಿದೆ. ಈ ಮಸೂದೆಯನ್ನು ಕರಾಳ ಶಾಸನವೆಂದೂ 'ಡ್ರೆಕೋನಿಯನ್'' ಎಂದೂ, 'ಮಿನಿಮೀಸಾ'ವೆಂದೂ ವಿರೋಧ ಪಕ್ಷದವರು ವರ್ಣಿಸಿರುತ್ತಾರೆ. ಇದರ ಪ್ರಕಾರ ಸರಕಾರ ಘೋಷಿಸುವ ಸಾರ್ವಜನಿಕ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಮುನ್ಸೂಚನೆಯಿಲ್ಲದೆ ಹಠಾತ್ ಮುಷ್ಕರ ನಡೆದರೆ ಸಂಬಂಧಪಟ್ಟ ಕಾರ್ಮಿಕರ ಮೇಲೆ ಕ್ರಮ ತೆಗೆದುಕೊಳ್ಳಬಹುದೆಂದೂ, ಕೆಲಸಕ್ಕೆ ಹಾಜರಾಗಲು ಅಪೇಕ್ಷಿಸುವವರನ್ನು ತಡೆಗಟ್ಟುವವರ ಮೇಲೂ, ಮುಷ್ಕರಕ್ಕೆ ಪ್ರೋತ್ಸಾಹ, ಬೆಂಬಲ ನೀಡುವ ನಾಯಕರ ಮೇಲೂ ಕ್ರಮ ತೆಗೆದುಕೊಳ್ಳುವ, ಅಂದರೆ, ಅವರಿಗೆ ಶಿಕ್ಷೆ ನೀಡುವ ಅಧಿಕಾರ ಸರಕಾರಕ್ಕಿದೆಂದು ನಮೂದಿಸಲಾಗಿದೆ.

ಈ ಕರಡು ಶಾಸನವು ಕಾರ್ಮಿಕರ ಮುಷ್ಕರ ಹೂಡುವ ಮೂಲಭೂತ ಹಕ್ಕನ್ನು ಕಸಿದುಕೊಳ್ಳುವ ಕರಾಳ ಶಾಸನವೆಂದು ವಿರೋಧ ಪಕ್ಷದ ನಾಯಕರಾದ ಶ್ರೀ ದೇವರಾಜ ಅರಸುರವರೇ ಹೇಳಿದ್ದರಲ್ಲಿ ಯಾವ ಅತಿಶಯೋ-

ಸಂಪಾದಕೀಯ

ಕ್ತಿಯೂ ಇಲ್ಲ. ಈಗ ಜಾರಿಯಲ್ಲಿರುವ ಶಾಸನಗಳಲ್ಲೂ ಈ ಅಂಶಗಳು ಅಡಗಿವೆ. ಈ ಮಸೂದೆಯು ಪಾಸಾಗಿದ್ದರೆ ಕಾರ್ಮಿಕ ಚಳುವಳಿಯನ್ನು ಮಟ್ಟಹಾಕಲು ಕಠೋರ ಅಸ್ತ್ರವೊಂದನ್ನು ಸರಕಾರದ ಕೈಯಲ್ಲಿ ಕೊಟ್ಟಂತಾಗುತ್ತಿತ್ತು. ಕಾರ್ಮಿಕರ ಮೇಲೆ ದಬ್ಬಾಳಿಕೆ ಇಮ್ಮಡಿಯಾಗುತ್ತಿತ್ತು.

ಈ ಮಸೂದೆಯನ್ನು ಹೋದವರ್ಷ ಅರಸುರವರೇ ತಾನು ಮುಖ್ಯಮಂತ್ರಿಯಾಗಿದ್ದಾಗ ತಯಾರುಮಾಡಿದ್ದರೂ ಅದನ್ನು ಕೈಬಿಟ್ಟಿದ್ದರು. ಈಗ ಹೊಸ ಮುಖ್ಯಮಂತ್ರಿಯವರು ಇದನ್ನು ತಂದಿದ್ದಾರೆ. ಶ್ರೀ ಅರಸುರವರು ಉತ್ತಮ ರೀತಿಯಲ್ಲಿ ಅದನ್ನು ವಿರೋಧಿಸಿರುತ್ತಾರೆ.

ಹಠಾತ್ತಾಗಿ ಮುಷ್ಕರಗಳು ನಡೆಯುವುದಕ್ಕೆ ಮಾಲೀಕರೇ ಕಾರಣ ಹೊರತು ಕಾರ್ಮಿಕರಲ್ಲವೆಂಬುದನ್ನು ನಾವು ಒತ್ತಿ ಹೇಳಬೇಕಾಗಿದೆ. ಸಂಬಂಧಪಟ್ಟ ಅಧಿಕಾರಿಗಳನ್ನೂ, ಮಾಲೀಕರನ್ನೂ ಶಿಕ್ಷೆಗೆ ಗುರಿಪಡಿಸಬೇಕಲ್ಲದೆ ಕಾರ್ಮಿಕರನ್ನಲ್ಲ. ಕಾರ್ಮಿಕರ ಬೇಡಿಕೆ ನ್ಯಾಯಬದ್ಧವಾಗಿರುವಾಗ ಅವರ ಹೋರಾಟ

(ಕಡೆಯ ಪುಟ ನೋಡಿ)

ಮತ್ತೊಂದು ಮಹಾ ಯುದ್ಧಕ್ಕೆ ಅಮೇರಿಕಾ ಸಂಚು

ಹೋರಾಡುತ್ತಿರುವ ಇರಾನ್ ಜನತೆಯಿಂದ ಮತ್ತೆ ಮತ್ತೆ ಪೆಟ್ಟು ತಿಂದರೂ ಸಾಮ್ರಾಜ್ಯಶಾಹಿ ಅಮೇರಿಕಾ ಒತ್ತೆಯಾಳುಗಳನ್ನು ಬಿಡಿಸುವ ನೆಪದಲ್ಲಿ ಇರಾನ್ ದೇಶದ ಸಾರ್ವಭೌಮತ್ವಕ್ಕೇ ಧಾಳಿ ಇಟ್ಟಿದ್ದನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪಾಲಿಟ್‌ಬ್ಯುರೋ ಖಂಡಿಸಿದೆ. ತನ್ನ ಕುಸಿಯುತ್ತಿರುವ ಪ್ರತಿಷ್ಠೆಯನ್ನು ಉಳಿಸಿಕೊಳ್ಳಲು ಅದು ಸಾಹಸ ಪ್ರವೃತ್ತಿ, ಆಕ್ರಮಣಕಾರಿ ಹೆಜ್ಜೆ ಹಾಕುತ್ತಿರುವುದು ಜಗತ್ತನ್ನು ಮತ್ತೊಂದು ಮಹಾ ಯುದ್ಧಕ್ಕೆ ನೂಕುವ ತಂತ್ರವಾಗಿದೆ ಎಂದು ಪಾಲಿಟ್‌ಬ್ಯುರೋ ಎಚ್ಚರಿಸಿದೆ.

ತಮ್ಮ ಸಾಹಸ ಕ್ರಮಗಳನ್ನು ಕೈಬಿಡುವುದಿಲ್ಲವೆಂದು ಅಮೇರಿಕಾದ ವಕ್ತಾರರು ಹೇಳಿರುವುದು ಗಮನಾರ್ಹ. ಈ ಮಧ್ಯೆ ಕ್ಯೂಬಾದ ವಿರುದ್ಧ ಸಹಾ ಕಾರ್ಯಾಚರಣೆ ನಡೆಸಲು ಯೋಜನೆ ಹಾಕುತ್ತಿರುವ ಸುದ್ದಿಗಳು ಬರುತ್ತಿವೆ. ಅಂತರ್‌ರಾಷ್ಟ್ರೀಯ ಸುದ್ದಿ ಸಂಸ್ಥೆಯ ಪ್ರಕಾರ ಕ್ಯೂಬಾದ ವಿರುದ್ಧ ಕಾರ್ಯಾಚರಣೆಗೆ ಅಮೇರಿಕಾ 20,000 ಸೈನಿಕರು, 42 ಹಡಗುಗಳು ಹಾಗೂ 350 ವಿಮಾನಗಳನ್ನು ಕಳಿಸಲಿದೆ. ಮೇ 8 ರಿಂದ ಪ್ರಾರಂಭವಾಗುವ ಕಾರ್ಯಾಚರಣೆಯಲ್ಲಿ ಎರಡು ಸಾವಿರ ಸಬ್‌ಮೆರಿನ್‌ಗಳು ಗ್ವಾಂಟನಾಮೋ ಎಂಬಲ್ಲಿ ಠಾಣೆ ಹಾಕುತ್ತವೆ. ಈಗಾಗಲೇ ಇಲ್ಲಿಗೆ 1200 ಸೈನಿಕರನ್ನು ಸಾಗಿಸಲಾಗಿದೆ. ರಾಕ್ಷಸಾಕಾರದ ಬಿ–12 ಬಾಂಬರುಗಳು ಸಮುದ್ರವನ್ನು ಆಕಾಶದಿಂದಲೇ ಕೊರೆಯುವ ಕಾರ್ಯವನ್ನು ಅಧ್ಯಯನ ಮಾಡಲಿವೆ. ಇದು ಸಮಾಜವಾದಿ ಕ್ಯೂಬಾದ ಸ್ವಾತಂತ್ರ್ಯ, ಸಾರ್ವಭೌಮತ್ವದ ಮೇಲೆ ಅಮೇರಿಕದ ನೇರ ಧಾಳಿಯಾಗಲಿದೆ. ಕಾರ್ಯಾಚರಣೆಗೆ ಸಾಲಿಡ್ ಶೇಲ್ಡ್ 80 ಎಂದು ಹೆಸರಿಡಲಾಗಿದೆ.

ಅಮೇರಿಕನ್ ಸಾಮ್ರಾಜ್ಯಶಾಹಿಗಳ ಈ ಪಿತೂರಿಯ ವಿರುದ್ಧ ದೇಶದ ಎಲ್ಲಾ ಪ್ರಗತಿಪರ ಶಕ್ತಿಗಳು ಒಕ್ಕೊರಲಿನಿಂದ ಪ್ರತಿಭಟಿಸಲು ಪಾಲಿಟ್‌ಬ್ಯುರೋ ಕರೆ ನೀಡಿದೆ. ಸ್ವಾತಂತ್ರ್ಯಪ್ರೇಮಿ ಅಮೇರಿಕಾದ ಜನತೆ ಈ ಹಿಂದೆ ತಮ್ಮ ಸರಕಾರದ ಅನೇಕ ಸಂಚುಗಳ ವಿರುದ್ಧ ಹೋರಾಟ ಮಾಡಿದ್ದಾರೆ, ಅದರಂತೆಯೇ ಇದನ್ನೂ ವಿರೋಧಿಸುವುದರಲ್ಲಿ ಸಂಶಯವಿಲ್ಲ. ಅಮೇರಿಕಾದ ಸಾಮ್ರಾಜ್ಯಶಾಹಿಗಳು ನಮ್ಮ ಸಮಾನ ಶತ್ರುಗಳು. ನಮ್ಮ ದೇಶವನ್ನು ಛಿದ್ರಗೊಳಿಸಲು ಅದು ಸದಾ ಪ್ರಯತ್ನಿಸುತ್ತಲೇ ಇದೆ. ನೆರೆಯ ಪಾಕಿಸ್ತಾನದಲ್ಲಿರುವ ಮಿಲಿಟರಿ ಸರ್ವಾಧಿಕಾರಿಗಳಿಗೆ ಶಸ್ತ್ರ ನೀಡುವ ಮೂಲಕ ಎರಡೂ ದೇಶಗಳ ಮಧ್ಯೆ ವಿರಸ ತಂದಿಡಲು ಅದು ಕೆಲಸ ಮಾಡುತ್ತಿದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ನಾವು ಸೂಕ್ತ ಸಮಯದಲ್ಲಿ ನಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಲೇ ಬೇಕು.

●

ಕಾರ್ಮಿಕರ ದಿನದಂದು ಕೆಂಬಾವುಟಗಳ ವಿಜೃಂಭಣೆ

ಅಂತರರಾಷ್ಟ್ರೀಯ ಕಾರ್ಮಿಕರ ದಿನವಾದ ಮೇ ಒಂದರಂದು ಕರ್ನಾಟಕ ರಾಜ್ಯದ ಕೈಗಾರಿಕಾ ಜೀವನಾಡಿಯಾದ ಬೆಂಗಳೂರು ನಗರದಲ್ಲಿ ಎಂದಿನಂತೆ ಕೆಂಬಾವುಟಗಳ ವಿಜೃಂಭಣೆ. ಆದರೆ ಈ ಸಲದ ಮೇ ದಿನದಂದು ಸಿ. ಐ. ಟಿ. ಯು. ಬಾವುಟಗಳು ಬಹುಸಂಖ್ಯೆಯಲ್ಲಿ ರಾರಾಜಿಸಿದ್ದು ಒಂದು ವಿಶೇಷ. ಕಾರ್ಮಿಕ ವರ್ಗಕ್ಕೆ ರಾಜಕೀಯ ದೃಷ್ಟಿಕೋನ ಬೆಳೆಸಿಕೊಳ್ಳುವಂತೆ ಆರಾಧನೆಯ ಕೆಲಸ ಮಾಡುತ್ತಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಸಿ. ಐ. ಟಿ. ಯು. ಕಾರ್ಮಿಕ ಸಂಘಟನೆ ಬೆಂಗಳೂರು ನಗರದಲ್ಲಿ ಬೆಳೆಯುತ್ತಿದೆ ಎಂಬುದು ಸ್ಪಷ್ಟವಾಗಿ ಕಾಣಿಸುತ್ತಿತ್ತು.

ವೈಕೋ, ಇಂಡಿಯನ್ ಟೊಬ್ಯಾಕೊ ಕಂಪನಿ, ಬೆಂಗಾಲ್ ಲ್ಯಾಂಪ್ಸ್, ಕ್ವಾಲಿಟಿ ಬಿಸ್ಕೆಟ್, ಹೋಟೆಲ್ ಉದ್ಯಮ, ಮತ್ತಿತರ ಅನೇಕ ಕಾರ್ಮಿಕ ಸಂಘಗಳ ಸದಸ್ಯರು ಕೆಂಬಾವುಟಗಳನ್ನು ಹಿಡಿದು ನಗರದ ನಾನಾ ಮೂಲೆಗಳಿಂದ ಮೆರವಣಿಗೆಯಲ್ಲಿ ಬಂದು ಕಬ್ಬನ್‌ಪಾರ್ಕಿನಲ್ಲಿ ಸೇರಿದರು.

"ಕಾಂಗ್ರೆಸ್‌ನೋರೆ – ಅನ್ನ ಕೊಡಿ ಬಟ್ಟೆ ಕೊಡಿ, ಎಲ್ಲರಿಗೂ ಕೆಲಸ ಕೊಡಿ ಇಲ್ಲದಿದ್ರೆ ರಾಜ್ಯ ಬಿಡಿ" ಎಂಬ ಪ್ರಧಾನ ಘೋಷಣೆಯು ಸಾವಿರಾರು ಮಂದಿ ಕಾರ್ಮಿಕರ ಒಕ್ಕೊರಲಿನ ಧ್ವನಿಯಾಗಿತ್ತು.

ಸುಮಾರು ಹತ್ತು ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಸೇರಿದ್ದ ಕಾರ್ಮಿಕರನ್ನು ಉದ್ದೇಶಿಸಿ ರಾಜ್ಯ ಸಿ. ಐ. ಟಿ. ಯು. ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಅವರು ಮಾತನಾಡಿ ರಾಜ್ಯಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ಖಂಡಿಸಿದರು. ಕಾರ್ಮಿಕರ ಪರವಾಗಿ ಅಸ್ತಿತ್ವದಲ್ಲಿರುವ ಪ. ಬಂಗಾಳದ ಮಾರ್ಕ್ಸಿಸ್ಟ್ ಸರ್ಕಾರ ಕಾರ್ಮಿಕ ಕಾಯಿದೆಯನ್ನು ತಿದ್ದುಪಡಿಮಾಡಿ ಇತ್ತೀಚೆಗೆ ಮಾಡಿರುವ ಕಾರ್ಮಿಕಪರ ಶಾಸನಗಳನ್ನು ಸಭೆಗೆ ವಿವರಿಸಿದರು.

ರಾಷ್ಟ್ರದ ಈಶಾನ್ಯ ಭಾಗದಲ್ಲಿನ ಅಸ್ಸಾಂ, ಮೇಘಾಲಯ ಮತ್ತು ಮಣಿಪುರ ರಾಜ್ಯಗಳಲ್ಲಿರುವ ಪ್ರಸಕ್ತ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಪ್ರಸ್ತಾಪಿಸಿ ಮಾತನಾಡಿದ ಸಿ. ಐ. ಟಿ. ಯು. ಅಧ್ಯಕ್ಷರು ಆ ಭಾಗದ ಜನತೆಯ ನೋವುಗಳನ್ನು, ಆ ಪ್ರದೇಶದ ಹಿಂದುಳಿದಿರುವಿಕೆಯನ್ನು ಕೇಂದ್ರ ಸರ್ಕಾರವು ಅರಿತುಕೊಂಡು ಸಮಸ್ಯೆಯ ಪರಿಹಾರ ಮಾಡಬೇಕೇ ಹೊರತು ಈಗಿರುವಂತೆ ಅಲ್ಲಿಗೆ ಮಿಲಿಟರಿಯನ್ನು ರವಾನಿಸುವುದರಿಂದ ಅಲ್ಲ ಎಂದರು.

ಆಫ್‌ಘಾನಿಸ್ತಾನದಲ್ಲಿನ ಜನಪರ ಸರ್ಕಾರವನ್ನು ಉರುಳಿಸಲು ಅಮೆರಿಕನ್ ಸಾಮ್ರಾಜ್ಯಶಾಹಿಗಳು ಪಾಕಿ-

(ಕೊನೆಯ ಪುಟ ನೋಡಿ)



ಮೇ ದಿನದಂದು ನಗರದ ಬೇರೆಬೇರೆ ಕಡೆಗಳಿಂದ ಬಂದ ಮೆರವಣಿಗೆಗಳ ಎರಡು ದೃಶ್ಯ

ಕೀಳರಿಮೆ ತೊರೆಯಿರಿ : ಕನ್ನಡಿಗರಿಗೆ ಲಂಕೇಶ್ ಕರೆ

ಸಂಸ್ಕೃತ ಮತ್ತು ಇಂಗ್ಲೀಷ್ ಭಾಷೆಗಳನ್ನು ಕಲಿತವರು ತಮಗಿಂತ ಮೇಲು, ಬರೀ ಕನ್ನಡ ಕಲಿತ ತಾವು ಕೀಳೆಂಬ ಭಾವನೆಯನ್ನು ತೊರೆಯ ಬೇಕೆಂದು ಖ್ಯಾತ ಕನ್ನಡ ಸಾಹಿತಿ ಪಿ ಲಂಕೇಶ್ ಕರೆ ಕೊಟ್ಟರು.

ಬಂಡಾಯ ಸಾಹಿತ್ಯ ಸಂಘಟನಾ ಸಮಿತಿಯವರು ಬೆಂಗಳೂರು ನಗರದಲ್ಲಿ ವ್ಯವಸ್ಥೆ ಮಾಡಿರುವ "ಕನ್ನಡ ಹೋರಾಟವಾರ" ಕಾರ್ಯಕ್ರಮದ ಉದ್ಘಾಟನೆಯ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾದಿ ಲಂಕೇಶ್ ಮಾತನಾಡಿದರು.

ನಮ್ಮ ಉಸಿರಾಗಿರುವ ಕನ್ನಡ ಭಾಷೆಯನ್ನು ಕನ್ನಡ ರಾಜ್ಯದಲ್ಲಿನ ಮಾಧ್ಯಮಿಕ ಶಾಲೆಗಳಲ್ಲೇ ಪ್ರಥಮ ಸ್ಥಾನದಿಂದ ತೆಗೆಯುವ ಮಾತನ್ನಾಡಿರುವ ರಾಜ್ಯ ಮುಖ್ಯಮಂತ್ರಿ ಗುಂಡೂರಾಯರ ಕ್ರಮವನ್ನು ಬೇಜವಾಬ್ದಾರಿಯ ಕ್ರಮ ಎಂದು ಕರೆದರಲ್ಲದೆ ರಾಯರು ಮುಖ್ಯಮಂತ್ರಿಗಳಾಗಿರುವುದೇ ಒಂದು ದೊಡ್ಡ ಅಪರಾಧವೆಂದು ಹೇಳಿದರು.

ನಾಲಿಗೆ ಹೊರಳದ ಕನ್ನಡದ ಇಡೀ ಕಪ್ಪು ಜನತೆಯಿಂದ ಆರಿಸಿಕೊಂಡು ಹೋಗಿರುವ ಮಂತ್ರಿ ಶಾಸಕರು ತಮ್ಮ ಜನತೆಯ ಭಾಷೆಗೆ ಧಕ್ಕೆ ಬರುತ್ತಿರುವಾಗ ಪ್ರತಿಭಟಿಸದೆ ಸುಮ್ಮನೆ ಕೂತು ರಾಜ್ಯದ ಬಹುಸಂಖ್ಯಾತ ಜನತೆಗೆ ಅವಮಾನ ಮಾಡಿದ್ದಾರೆ- ಇವರಿಗೆ ನಾಚಿಕೆಯಾಗಬೇಕು ಎಂದು ಛೀಮಾರಿ ಹಾಕಿದರು.

ಉರ್ದುವಿನಂತಹ ಸುಂದರವಾದ ಭಾಷೆಯನ್ನು ಎರಡು ಮೂರು ಶಬ್ದ ಸೇರಿಸುವುದರ ಮೂಲಕಹಿಂದಿಯನ್ನಾಗಿ ಮಾಡಿ ಒಂದು ಸುಂದರವಾದ ಭಾಷೆಯನ್ನೇ ಹಾಳುಮಾಡಿದ ಬ್ರಾಹ್ಮಣ್ಯವಾದ ಶಕ್ತಿಗಳ ಮೇಲೆ ಸಾಹಿತಿ ಲಂಕೇಶರಿಗೆ ತುಂಬಾ ಸಿಟ್ಟು ಬಂತು. ಇದೇ ಸಂಪ್ರದಾಯ ಶಕ್ತಿಗಳು ಆಕಾಶವಾಣಿಯಲ್ಲಿ ಸುಪ್ರಭಾತ-ಸಂಸ್ಕೃತ ವಾರ್ತಾ ಪ್ರಸಾರ ಮಾಡುತ್ತಿವೆ. ಇದರ ವಿರುದ್ಧ ನಾವ್ಯಾರೂ ಪ್ರತಿಭಟಿಸಲಿಲ್ಲ ಎಂದು ವ್ಯಥೆ ಪಟ್ಟರು.

ಸಂಸ್ಕೃತವನ್ನು ಪ್ರಥಮ ಸ್ಥಾನಕ್ಕೆ ತಂದಿದ್ದೇ ಆದರೆ ರಾಷ್ಟ್ರದ ಮುಸ್ಲಿಮರಿಗೆ, ಕ್ರಿಶ್ಚಿಯನ್ನರಿಗೆ ಏನನ್ನಿಸುತ್ತದೆ? ಎಂಬ ಬಗ್ಗೆ ನಿಮಗೆ ಕೊಂಚವಾದರೂ ಗೊತ್ತೇನ್ರಿ? ಎಂದು ಕೆರಳಿ ಕೇಳಿದ ಲಂಕೇಶರು ರಾಜ್ಯ ವ್ಯವಸ್ಥೆಯ ವಿಕೇಂದ್ರೀಕರಣಕ್ಕೆ ಆಗ್ರಹ ಪಡಿಸಿದರು. ವಿಕೇಂದ್ರೀಕರಣವಾದಾಗ ನಮ್ಮ ಭಾಷೆ ನಮ್ಮದಾಗುತ್ತೆ ಎಂದೂ ಸಹ ಅವರು ಹೇಳಿದರು.

ಗುಂಡೂ ದಾದಾಗಿರಿ ಇಲ್ಲಿ ನಡೆಯೋಲ್ಲ :

ಕನ್ನಡದ ಸ್ಥಾನ ತೆಗೆಯಬೇಡಿ ಎಂದು ಪ್ರಾರ್ಥಿಸಿಕೊಳ್ಳುವುದರಿಂದ ಏನೂ ಪ್ರಯೋಜನವಿಲ್ಲವೆಂದು ಹೇಳಿದ ಲಂಕೇಶರು; ಜನಶಕ್ತಿಯನ್ನು ಸಂಘಟಿಸಿ "ಗುಂಡೂ......ನಿನ್ನ ದಾದಾಗಿರಿ ಇಲ್ಲಿ ನಡೆಯೋಲ್ಲ" ಎಂದು ಹೇಳಬೇಕೆಂದರು.

ಒಟ್ಟಾರೆಯಾಗಿ ಈ ಸಮಸ್ಯೆಯು ರಾಜಕೀಯ, ಸಾಂಸ್ಕೃತಿಕ ಶಿಕ್ಷಾಟದ ಪ್ರಶ್ನೆಯಾಗಿದೆ ಎಂದು ಸ್ಪಷ್ಟವಾಗಿ ಹೇಳಿದ ಕ್ರಿಯಾಶೀಲ ಬರಹಗಾರ ಲಂಕೇಶ್ "ನಮ್ಮ ಜನ ನಮ್ಮ ಭಾಷೆಯನ್ನು ಪ್ರೀತಿಸಬೇಕು" ಎಂದರು.

ಒಬ್ಬ ಬರಹಗಾರನಿಗೆ ಇರಬೇಕಾದಷ್ಟೇ ಧೈರ್ಯವಿದ್ದ-ಧೈರ್ಯದಿಂದ ಮಾತನಾಡಿದವರು ಜನಪ್ರಿಯ ಬುದ್ಧಿಜೀವಿ ಅಧ್ಯಾಪಕ ಡಾ॥ಜಿ.ರಾಮಕೃಷ್ಣ. ಸಂಸ್ಕೃತ ಮೊದಲು, ಕನ್ನಡ ಎರಡನೆಯದು, ಇನ್ನೊಂದು ಮೂರನೆಯದು ಎಂದು ವರ್ಗೀಕರಣ ಮಾಡಲು ಸರ್ಕಾರದ ಅಯೋಗ್ಯರಿಗೆ ಅಧಿಕಾರ ಕೊಟ್ಟವರಾರು ಎಂಬುದು ಜಿ. ಆರ್. ಅವರ ಕೋಪದ ಪ್ರಶ್ನೆ.

ಸಂಸ್ಕೃತವನ್ನು ಮಡಿವಂತಿಕೆಯಿಂದ ಮೊದಲು ವಿಮೋಚನೆ ಮಾಡಿ ಎಂದು ಸಂಪ್ರದಾಯ ವಾದಿಗಳಿಗೆ ಡಾ॥ ರಾಮಕೃಷ್ಣ ಕರೆಕೊಟ್ಟರು. ಸಂಸ್ಕೃತ ಭಾಷೆಯ ಉದ್ಗ್ರಂಥಗಳನ್ನ ಯಾವ ವರ್ಗದ ದೃಷ್ಟಿಕೋನದಿಂದ ನೋಡುತ್ತೇವೆ ಎಂಬುದು ಮುಖ್ಯವಾಗುತ್ತದೆಂದು ಅಭಿಪ್ರಾಯ ಪಟ್ಟ ಜಿ. ಆರ್. ಅವರು ಕನ್ನಡ ಭಾಷೆಯ ಆದ್ಯಸ್ಥಾನವನ್ನು ತೆಗೆದುಹಾಕಲು ಸಾಧ್ಯವೇ ಇಲ್ಲ ಎಂದರು.

ಬೆಂಬಲಿಸುವೆ :

'ಕನ್ನಡ ಹೋರಾಟವಾರ' ಕಾರ್ಯಕ್ರಮವನ್ನು ಔಪಚಾರಿಕವಾಗಿ ಉದ್ಘಾಟಿಸಿದ ವಿರೋಧ ಪಕ್ಷದ ನಾಯಕ ದೇವರಾಜ ಅರಸು ಅವರು, ಕನ್ನಡ-ಸಂಸ್ಕೃತ ವಿವಾದ ಮತ್ತೆ ಏಕೆ ಬಂದಿದೆ ಎಂಬುದೇ ತಮಗೆ ಅರ್ಥವಾಗುತ್ತಿಲ್ಲ ಎಂದರು. ಉಡುಪಿಯಲ್ಲಿ ಅಷ್ಟಮಠಾಧೀಶರು ಸೇರಿ 'ಬ್ರಾಹ್ಮಣೋತ್ತಮ'ನೆಂದು ಭಾವಿಸಿಕೊಂಡ ಮುಖ್ಯಮಂತ್ರಿ ಗುಂಡೂರಾಯರಿಂದ ಸಂಸ್ಕೃತ ಪರವಾದ ಹೇಳಿಕೆಯನ್ನು ಪಡೆದಿದ್ದಾರೆ. ಇದಕ್ಕೆ ಯಾಕೆ ತಲೆಕೆಡಿಸಿಕೊಳ್ಳಬೇಕೊ ಎಂದೂ ಸಹ ಅನುಮಾನ ವ್ಯಕ್ತಪಡಿಸಿದರು ಅರಸು. ಟಿಪಿಕಲ್ ರಾಜಕಾರಣಿಯ ಹಾಗೇ ಮಾತನಾಡಿದ ಮಾಜೀ ಮುಖ್ಯಮಂತ್ರಿಗಳು ಮಠಗಳನ್ನು, ಸಂಪ್ರದಾಯವಾದಿಗಳನ್ನು ನೇರವಾಗಿ ಟೀಕಿಸುವ ಗೊಡವೆಗೆ ಹೋಗಲಿಲ್ಲ. ಬಾಯಿಪಾಠ ಮಾಡಿಕೊಂಡು ಸಂಸ್ಕೃತದಲ್ಲಿ ವೇದ-ಮಂತ್ರಗಳನ್ನು ಉಚ್ಚರಿಸುವ ಜನರಲ್ಲಿ ನೂರಕ್ಕೆ 99 ಜನರಿಗೆ ಅದರ ಅರ್ಥವೇ ಗೊತ್ತಿರುವುದಿಲ್ಲ ಎಂಬುದು ತಮ್ಮ ಅನುಭವದ ಮಾತೆಂದು ಹೇಳಿ ಸಂಸ್ಕೃತದ ಅರ್ಥವೇ ಗೊತ್ತಿಲ್ಲದ ಜನ ಕನ್ನಡ ಮಕ್ಕಳಿಗೆ ಅದನ್ನು ಕಲಿಸುವುದು ಹೇಗೆಂದು ಪ್ರಶ್ನಿಸಿದರು.

ಕನ್ನಡ ಚಳುವಳಿಯ ಬಗ್ಗೆ ಆಕಾಶ ದುದ್ದಕ್ಕೂ ನೆಗೆಯುತ್ತಿದ್ದ (ವಾಟಾಳ್ ನಾಗರಾಜ್) ಜನ ಈಗ ಪತ್ತೆಯೇ ಇಲ್ಲವಲ್ಲ ಎಂದು ವ್ಯಂಗ್ಯವಾಡಿದ ಅರಸು ತಾವು ಕನ್ನಡಿಗರ ಪರ ನಿಲ್ಲುತ್ತೇವೆಂದು ಭರವಸೆಕೊಟ್ಟರು.

ಸಂಸ್ಕೃತವೊಂದೇ ಕುತ್ತಲ್ಲ :

ಕನ್ನಡ ಭಾಷೆಗೆ ಸಂಸ್ಕೃತವೊಂದೇ ಕುತ್ತಲ್ಲ-ಇಂಗ್ಲೀಷ್, ಹಿಂದಿಯೂ ಕೂಡ ಕನ್ನಡಕ್ಕೆ ಕುತ್ತು ಎಂದು ಹೇಳಿದರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿಶ್ವವಿದ್ಯಾಲಯ ಕನ್ನಡ ವಿಭಾಗದ ಮಾಜಿ ನಿರ್ದೇಶಕ ಡಾ॥ ಹಾ. ಮಾ. ನಾಯಕರು.

ಧೈರ್ಯವಿಲ್ಲದ ರಾಜಕಾರಣಿಗಳಿಂದಾಗಿ ತಲೆತಲಾಂತರದಿಂದಲೂ ತುಳಿಸಿಕೊಂಡು ಬಂದ ಕನ್ನಡ ಭಾಷೆ ಇನ್ನೂ ಉಳಿದಿರುವುದು ಅದರ ಶಕ್ತಿಯಿಂದಾಗಿ ಎಂದು ಹೆಮ್ಮೆ ಪಟ್ಟರು ಹಾ ಮಾ. ನಾಯಕರು. ಇಡೀ ದೇಶದಲ್ಲಿ 2012 ಜನ ತಮ್ಮ ಮಾತೃಭಾಷೆ ಸಂಸ್ಕೃತವೆಂದು ದಾಖಲೆ ಮಾಡಿಸಿಕೊಂಡಿದ್ದಾರೆ. 2012 ಜನರ ಭಾಷೆಗೆ ಇಡೀ ದೇಶದಲ್ಲಿಯೇ ಪ್ರಥಮ ಸ್ಥಾನ ಕೊಡುವುದು ಯಾವ ನ್ಯಾಯ ಎಂದು ಪ್ರಶ್ನಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಮತ್ತೊಬ್ಬ ವಿದ್ವಾಂಸ ಡಾ॥ ಎಂ. ಚಿದಾನಂದ ಮೂರ್ತಿಯವರು ನಮ್ಮಲ್ಲಿ ಅತಿಯಾದ ಔದಾರ್ಯವಿದೆ ಎಂದು ಹೇಳಿ ಭಾಷೆಯನ್ನು ಪ್ರೀತಿಸುವುದನ್ನು ನೆರೆಯ ತಮಿಳುನಾಡಿನಿಂದ ಕಲಿಯಬೇಕೆಂದರು.

ಬೆಂಗಳೂರು ವಿ. ವಿ. ಅಧ್ಯಾಪಕರು ಹಾಗೂ ಬಂಡಾಯ ಸಾಹಿತ್ಯ ಸಂಘಟನಾ ಸಮಿತಿಯ ಸಂಚಾಲಕರೂ ಆದ ಬರಗೂರು ರಾಮಚಂದ್ರಪ್ಪ ಮತ್ತು ಸಿದ್ಧಲಿಂಗಯ್ಯ ಕ್ರಮವಾಗಿ ಸ್ವಾಗತಿಸಿದರು ಮತ್ತು ವಂದಿಸಿದರು.

ತಾತಗುಣಿ ಕಾರ್ಮಿಕರ ಬಂಧನ-ಬಿಡುಗಡೆ

ನಾಲ್ಕು ವರ್ಷಗಳಿಂದ ಸತತವಾಗಿ ಹೋರಾಟ ನಡೆಸುತ್ತಿರುವ ತಾತಗುಣಿ ಎಸ್ಟೇಟ್ ಕಾರ್ಮಿಕರು ವಿಧಾನಸೌಧದ ಎದುರು ಕಳೆದ ಆರು ತಿಂಗಳಿಂದ ಸತ್ಯಾಗ್ರಹ ನಡೆಸುತ್ತಿದ್ದರೂ ಆಳುವ ಸರ್ಕಾರದ ಕಿವಿಗೆ ಕೇಳುತ್ತಿಲ್ಲ. ಕುಂಟು ನೆಪಗಳನ್ನು ಹೇಳಿ ಅಗ-ಈಗ ಎಂದು ಸಮಸ್ಯೆಯನ್ನು ಮುಂದೂಡುತ್ತಾ ಕಾರ್ಮಿಕ ಮಂತ್ರಿಗಳು ತಮ್ಮ ಖುಷಿಯಲ್ಲಿ ತಾವು ಕಾಲಕಳೆಯುತ್ತಿದ್ದಾರೆ. ಮುಖ್ಯ ಮಂತ್ರಿಗಳಿಗೆ ಗದ್ದೆ ಹೊರಲು, ದೆಹಲಿಯಿಂದ ಬೆಂಗಳೂರಿಗೆ ಓಡಾಡಲು, ಪತ್ರಿಕಾ ಹೇಳಿಕೆಗಳನ್ನು ನೀಡುವುದಕ್ಕೆ ವೇಳೆ ಸಾಲದಾಗಿರುವಾಗ ಇನ್ನು ದಡಿಯುವ ವರ್ಗವನ್ನು ವಿಚಾರಿಸಲು ವ್ಯವಧಾನವೆಲ್ಲಿ ?

ದೊರೆಯುವರೆಗೆ ದೂರು, ದಿಲ್ಲಿಯವರೆಗೆ ಯಾತ್ರೆ. ದೊರೆಗಳಿಗೆ ಜನ ಸಾಮಾನ್ಯರ ಕೂಗು ಕೇಳಬೇಕಾದರೆ, ಅವರು ಇರುವಲ್ಲಿಯೇ ಹೋಗಬೇಕು. ಆದ್ದರಿಂದ ತಾತಗುಣಿ ಕಾರ್ಮಿಕರು ತಾ. 22-4-80ರಂದು ಕಾಂ. ಪಿ. ಜಗನ್ನಾಥ್ ನೇತೃತ್ವದಲ್ಲಿ ಮುಖ್ಯ ಮಂತ್ರಿಗಳ ನಿವಾಸದ ಮುಂದೆ ಶಾಂತಿಯುತ ಉಪವಾಸ ಮುಷ್ಕರ ನಡೆಸಲು ಮೆರವಣಿಗೆ ಹೊರಟರು ಆದರೆ ದೊರೆಗಳಿಗೆ ಪ್ರಜೆಗಳನ್ನು ನೋಡಲು ಇಷ್ಟವಿರಲಿಲ್ಲ, ಅವರು ತನ್ನ ಮನೆಯ ಮುಂದೆ ಉಪವಾಸ ಸತ್ಯಾಗ್ರಹ ನಡೆಸುವುದಂತೂ ಸಹಿಸಲು ಸಾಧ್ಯವಾಗದ ವಿಷಯ. ಮೆರವಣಿಗೆ ಮುಖ್ಯಮಂತ್ರಿಗಳ ನಿವಾಸಕ್ಕೆ ಇನ್ನೂ ಒಂದು ಫರ್ಲಾಂಗ್ ದೂರ ಇರುವಂತೆಯೇ ಪೋಲೀಸರ ಆಗಮನ. ಮುಖ್ಯ ಮಂತ್ರಿಗಳು ಊರಲ್ಲಿಲ್ಲ, ಮುಂದಕ್ಕೆ ಹೋದಲ್ಲಿ ಬಂಧಿಸಬೇಕಾಗುವುದೆಂದು ಎಚ್ಚರಿಕೆಯ ಅಬ್ಬರ. ಆದರೂ ಮೆರವಣಿಗೆ ಘೋಷಣೆಗಳನ್ನು ಕೂಗುತ್ತಾ ಮುಂದೆ ನಡೆಯಿತು. ಕಾಂ. ಜಗನ್ನಾಥ್ ಸೇರಿದಂತೆ, ಹೆಂಗಸರು, ಮಕ್ಕಳು ಆದಿಯಾಗಿ ಅರವತ್ತೈದು ಜನ ಕಾರ್ಮಿಕರನ್ನು ಪೋಲೀಸರು ಬಂಧಿಸಿ ಎಳೆದೊಯ್ದರು.

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಬಂಧನದಲ್ಲಿದ್ದ ಕಾರ್ಮಿಕರು, ಜೈಲಿನ ಒಳಗೂ ಹೋರಾಟ ಪ್ರಾರಂಭಿಸಿದರು. ಪೋಲೀಸರು ವಿನಾಕಾರಣ ನಿಷೇಧಾಜ್ಞೆಯನ್ನು ಹಾಕಿ, ಹೋರಾಟವನ್ನು ಮುರಿಯಲು ತಮ್ಮನ್ನು ಬಂಧಿಸಿದ್ದಾರೆಂದು ಆಪಾದಿಸಿ ಕಾಂ. ಪಿ. ಜಗನ್ನಾಥ್ ಉಪವಾಸ ಕುಳಿತರು. ತಾ. 27-4-80ರ ವರೆಗೆ ಉಪವಾಸವಿದ್ದ ಜಗನ್ನಾಥ್ ಹಾಗೂ ಮತ್ತಿತರರನ್ನು ತಾ. 28-4-80ರಂದು ಬಿಡುಗಡೆ ಮಾಡಲಾಯಿತು.

ಕಾರ್ಮಿಕರ ಬಂಧನವನ್ನು ಖಂಡಿಸಿ ಬೆಂಗಳೂರು ಜಿಲ್ಲಾ ಸಿ. ಐ. ಟಿ. ಯು., ರೈತಸಂಘ, ಹೋಟೆಲ್ ಕಾರ್ಮಿಕರ ಸಂಘ, ಭಾರತ ವಿದ್ಯಾರ್ಥಿ ಫೆಡರೇಶನ್ ಮುಂತಾದ ಸಂಘಟನೆಗಳು ಹೇಳಿಕೆ ನೀಡಿವೆ. ತಾ. 26-4-80 ರಂದು ಹೋಟೆಲ್ ಕಾರ್ಮಿಕರು ಕಾಂ. ರಾಜನ್ ನೇತೃತ್ವದಲ್ಲಿ ಪಂಜಿನ ಮೆರವಣಿಗೆಯನ್ನು ರೋಚ್ ಮನೆಯವರೆಗೆ ತೆಗೆದುಕೊಂಡು ಹೋಗಲಾಯಿತು. ಸಮಸ್ಯೆಯನ್ನು ಶೀಘ್ರ ಪರಿಹರಿಸಿ, ಕಾರ್ಮಿಕರಿಗೆ ನ್ಯಾಯ ಒದಗಿಸದಿದ್ದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದರು.

ಎಸ್ಟೇಟ್‌ನಲ್ಲಿ ಕೆಲಸ ಮಾಡಲು ಬೇರೆ ಕಡೆಯಿಂದ ಕೆಲಸಗಾರರನ್ನು ಪೋಲೀಸರ ರಕ್ಷಣೆಯಲ್ಲಿ ತರಲಾಗುತ್ತಿದೆ. ಹೋರಾಟಕ್ಕೆ ಬೆಂಬಲ ನೀಡುತ್ತಿರುವ ಬೆಂಗಳೂರು ದಕ್ಷಿಣ ತಾಲ್ಲೂಕು ರೈತಸಂಘದ ಮುಖಂಡರಾದ ಚಿಕ್ಕವಜ್ರಪ್ಪ, ಗುಂಡಪ್ಪ, ಇಂದ್ರನ್, ವಿವೇಕಾನಂದ, ಪಾಪಣ್ಣ ಮುಂತಾದವರನ್ನು ಪೋಲೀಸರು ಹಾಡುಹಗಲಲ್ಲೇ ಅವಾಚ್ಯ ಶಬ್ದಗಳಲ್ಲಿ ಬಯ್ಯುವುದಲ್ಲದೆ ಮೇ ಒಂದನೇ ತಾರೀಖು ಮೇಲ್ಯಾಣಿಸಿದ ವ್ಯಕ್ತಿಗಳನ್ನು ಪೋಲೀಸರೆಲ್ಲಾ ಸೇರಿ ಥಳಿಸಿದ್ದಾರೆ. ಕಾರ್ಮಿಕರನ್ನು ಬೆಂಬಲಿಸಿದರೆ ಉಳಿದವರಿಗೂ ಇದೇ ಗತಿ ಎಂದು ಹಳ್ಳಿಯವರಿಗೆ ಬೆದರಿಸುತ್ತಿದ್ದಾರೆ. ಪೋಲೀಸರ ಈ ದೌರ್ಜನ್ಯವನ್ನು ಖಂಡಿಸಲು ತಾ. 7-5-80 ರಂದು ರೈತ-ಕಾರ್ಮಿಕರ ಜಾಥಾ ಒಂದು ತಲಘಟ್ಟಪುರ ಹಾಗೂ ತಟ್ಟುಗುಪ್ಪೆಯಿಂದ ಕಗ್ಗಲಿಪುರಕ್ಕೆ ಹೊರಡುತ್ತದೆ.

ಹೋರಾಡುತ್ತಿರುವ ಕಾರ್ಮಿಕರ ಪರಿಸ್ಥಿತಿಯನ್ನು ಹಳ್ಳಿಯವರಿಗೆ ವಿವರಿಸಿ, ರೈತ-ಕಾರ್ಮಿಕರ, ಜನಸಾಮಾನ್ಯರ ಬೆಂಬಲವನ್ನು ಹೋರಾಟಕ್ಕೆ ಪಡೆಯುವುದು, ನಾಚಿಕೆಗೆಟ್ಟ ರಾಜ್ಯ ಸರ್ಕಾರದ ವರ್ತನೆಯನ್ನು ಜನತೆಯ ಮುಂದಿಡುವುದು ಮೆರವಣಿಗೆಯ ಉದ್ದೇಶ. ಅದೇ ದಿನ ಸಂಜೆ ಆರು ಗಂಟೆಗೆ ಕಗ್ಗಲಿಪುರದಲ್ಲಿ ಬಹಿರಂಗ ಸಭೆಯನ್ನು ಸಹಾ ಹಾಕಲಾಗಿದೆ.

ಈ ದೀರ್ಘ ಹೋರಾಟವನ್ನು ಯಶಸ್ವಿಯಾಗಿ ಮುಂದುವರಿಸಲು ರಾಜ್ಯದ ದುಡಿಯುವವರ್ಗ ತನು, ಮನ, ಧನ ಸಹಾಯ ನೀಡಬೇಕೆಂದೂ ನಾಲ್ಕು ವರ್ಷಗಳಷ್ಟು ಹಳೆಯದಾದ ಮುಷ್ಕರ ಕಾರ್ಮಿಕವರ್ಗದ ಚಳುವಳಿಯಲ್ಲಿ ಒಂದು ಮೈಲಿಗಲ್ಲಾಗುವುದೆಂದು ಕಾಂ. ಜಗನ್ನಾಥ್ ವಿನಂತಿಸಿದ್ದಾರೆ.

ಕೌನ್ಸಿಲರುಗಳ ಭ್ರಷ್ಟಾಚಾರ

ಶಿರಾ ತಾಲ್ಲೂಕಿನ ಪುರಸಭೆಯ ವತಿಯಿಂದ ಮನೆಕಟ್ಟಿಕೊಳ್ಳಲು ಬಡವರಿಗೆ ಸಹಾಯಮಾಡುವ ಕಾರ್ಯಕ್ರಮವಿದೆ. ಆದರೆ ಪುರಸಭೆಯ ಕೌನ್ಸಿಲರ್‌ಗಳು ಬಡವರಲ್ಲದ ತಮ್ಮ ಸಂಬಂಧಿಕರಿಗೆ ಹಣ ಕೊಡಿಸುತ್ತಿದ್ದಾರೆ. ಈ ಅನ್ಯಾಯದ ಬಗ್ಗೆ ಪ್ರಗತಿಪರ ಶಕ್ತಿಗಳು ಹೋರಾಟ ನಡೆಸಬೇಕಾಗಿದೆ.

ಈಗ
ತ್ರಿಪುರಾದಲ್ಲಿ

* ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆ ಕೇವಲ ಘೋಷಣೆಯಲ್ಲ
* ಪ್ರಜಾಸತ್ತೆ ಎನ್ನುವುದು ಕೇವಲ ರಾಜಕೀಯ ಪುರಾಣವಲ್ಲ
* ಮಾತನಾಡುವ ಮತ್ತು ಬರೆಯುವ ಸ್ವಾತಂತ್ರ್ಯ ಔಪಚಾರಿಕತೆಯಲ್ಲ

ದಿನನಿತ್ಯದ ವಾಸ್ತವಿಕತೆ

ಎಂಬುದನ್ನು ಕೆಳಗಿನ ಸಂಗತಿಗಳು ಪ್ರತಿಬಿಂಬಿಸುತ್ತವೆ

ಪ್ರಜಾಸತ್ತಾತ್ಮಕ ಸಂಸ್ಥೆಗಳು	ಪ್ರಪ್ರಥಮ ಬಾರಿಗೆ ಗುಪ್ತ ಮತದಾನದ ಮೂಲಕ ರಚಿಸಲ್ಪಟ್ಟ ಗ್ರಾಮಪಂಚಾಯಿತಿಗಳು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಗ್ರಾಮೀಣ ಬದುಕಿನ ಮಟ್ಟವನ್ನು ಮೇಲೆತ್ತಲು ಶ್ರಮಿಸುತ್ತಿವೆ. ಒಂದು ಬ್ಲಾಕಿನ ಅಗತ್ಯತೆಗಳು ಮತ್ತು ಅಭಿವೃದ್ಧಿಯನ್ನು ಬ್ಲಾಕ್ ಪಂಚಾಯತ್ ಸಮಿತಿಗಳೇ ನಿರ್ಧರಿಸುತ್ತಿವೆ.
ಸರ್ಕಾರಿ ಉದ್ಯೋಗ	ಸರ್ಕಾರಿ ನೌಕರರು ಮತ್ತು ಪೋಲೀಸರು ಸೇರಿದಂತೆ ಎಲ್ಲಾ ದುಡಿಯುವ ಜನತೆ ಸಂಘ ಕಟ್ಟಿಕೊಳ್ಳುವ ಹಕ್ಕನ್ನು ಪಡೆದಿದ್ದಾರೆ. ಎಡರಂಗ ಸರಕಾರದ ಉದ್ಯೋಗ ನೀತಿಯಲ್ಲಿ ಬಡವರಿಗೆ ಮತ್ತು ಅಲ್ಪಸಂಖ್ಯಾತರಿಗೆ ಆದ್ಯತೆಯ ಭರವಸೆ ನೀಡಲಾಗಿದೆ. ನಾಲ್ಕನೇ ದರ್ಜೆ ನೌಕರರಿಗೆ ಸರಕಾರ ಉಚಿತ ವಾಸದ ಮನೆ ನೀಡಿರುವುದಲ್ಲದೆ, ವಿಶ್ರಾಂತಿ ವೇತನವನ್ನು ಹೆಚ್ಚಿಸಲಾಗಿದೆ.
ಕಾರ್ಮಿಕರು	ಜಮೀನು, ಕಾರ್ಖಾನೆ, ತೋಟ ಅಥವಾ ರಸ್ತೆಯಲ್ಲಿ ಕೆಲಸ ಮಾಡುತ್ತಿದ್ದರೂ, ಹೆಚ್ಚಿಸಿದ ಕೂಲಿಯನ್ನು ಪಡೆಯುತ್ತಾರೆ. ಗಂಡು ಮತ್ತು ಹೆಣ್ಣು ಸಮಾನ ವೇತನ ಪಡೆಯುತ್ತಾರೆ. ಗ್ರಾಮಾಂತರ ತಲಾರಿಗಳು ಮೊದಲಿಗಿಂತ ಹೆಚ್ಚಿನ ಸಂಬಳದ ಜೊತೆ ವಿಶ್ರಾಂತಿ ವೇತನದ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ.
ಸಣ್ಣ ರೈತರು	ಎರಡು ಸ್ಟ್ಯಾಂಡರ್ಡ್ ಎಕರೆಯವರೆಗೆ ಭೂಕಂದಾಯವನ್ನು ಮಾಫಿ ಮಾಡಿದೆ. ಎಲ್ಲಾ ರೀತಿಯ ಸಾಲಗಳಿಂದ ಮುಕ್ತರಾಗಿ ಹಳ್ಳಿಯಲ್ಲಿ ಬಡ್ಡಿಗೆ ಹಣ ಕೊಡುವವರ ಹಿಡಿತದಿಂದ ಪಾರಾಗಿದ್ದಾರೆ. ಸಹಕಾರಿ ಸೊಸೈಟಿಗಳ ವ್ಯವಸ್ಥೆಯಿಂದಾಗಿ ಸುಲಭ ದರದಲ್ಲಿ ಸಾಲ ದೊರೆಯುವುದಲ್ಲದೆ, ಉತ್ಪನ್ನಗಳ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಜಮೀನಿನ ಮೇಲೆ ಗೇಣಿದಾರರ ಹಕ್ಕನ್ನು ಸ್ಥಾಪಿಸಲು ಕಾನೂನಿನ ನೆರವು ದೊರೆಯುತ್ತದೆ. ಲಾಭವನ್ನು ಆಧರಿಸಿ ಅಧಿಕ ಕರ ಹೇರುವ ಬದಲು ಜಮೀನಿಗೆ ಬಾಡಿಗೆಯನ್ನು ನಿರ್ಧರಿಸಲಾಗಿದೆ.
ಗುಡ್ಡಗಾಡಿನ ಜನರು	ತಮ್ಮ ಅಗತ್ಯತೆಯ ಪ್ರತ್ಯೇಕ ಜಿಲ್ಲಾ ಮಂಡಳಿಯನ್ನು ಪಡೆದಿದ್ದಾರೆ. ಅವರ ಮಾತೃಭಾಷೆಯನ್ನು ರಾಜ್ಯದ ದ್ವಿತೀಯ ಭಾಷೆಯನ್ನಾಗಿ ಮಾನ್ಯ ಮಾಡಲಾಗಿದೆ. ಅಕ್ರಮವಾಗಿ ಪರಭಾರೆಯಾದ ಅವರ ಜಮೀನನ್ನು ಅವರಿಗೇ ಹಿಂದಿರುಗಿಸಲಾಗಿದೆ. ಸರ್ಕಾರಿ ಸೇವೆಯಲ್ಲಿ ಅವರ ಮೀಸಲಾತಿಯನ್ನು ದೃಢಪಡಿಸಲಾಗಿದೆ.
ವಿದ್ಯಾರ್ಥಿಗಳು	ಹನ್ನೆರಡನೇ ತರಗತಿಯವರೆಗೆ ಉಚಿತ ವಿದ್ಯಾಭ್ಯಾಸದ ಸೌಲಭ್ಯ ಪಡೆದಿದ್ದಾರೆ. ಒಂದರಿಂದ ಐದನೇ ತರಗತಿಯವರೆಗೆ ಓದುತ್ತಿರುವವರು ಮಧ್ಯಾಹ್ನದ ಊಟ ಪಡೆಯುತ್ತಾರೆ. ರಿಯಾಯಿತಿ ದರದಲ್ಲಿ ಪುಸ್ತಕಗಳು. ಹೆಚ್ಚಿಸಿದ ದರದಲ್ಲಿ ಸ್ಟೈಪೆಂಡ್ ಮತ್ತು ಸ್ಕಾಲರ್‌ಶಿಪ್. ಮುಸ್ಲಿಮರು ಮತ್ತು ಹರಿಜನ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಊಟದ ವ್ಯವಸ್ಥೆ. ಪರಿಶಿಷ್ಟ ಜಾತಿ, ಜನಾಂಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಹೆಚ್ಚಿಸಿದ ಸ್ಟೈಪೆಂಡ್ ವ್ಯವಸ್ಥೆ.

ಸಾಮೂಹಿಕ ಬಡತನ, ಏರುತ್ತಿರುವ ನಿರುದ್ಯೋಗ, ಹೆಚ್ಚುತ್ತಿರುವ ಆದಾಯದ ಅಸಮಾನತೆ ಮುಂತಾದ ದೇಶದ ಬೃಹತ್ ಸಮಸ್ಯೆಗಳ ಮಧ್ಯೆ, ತ್ರಿಪುರಾದ ಎಡರಂಗ ಸರಕಾರ ಎಲ್ಲಾ ರೀತಿಯ ಶೋಷಣೆಗಳಿಂದ ಮುಕ್ತವಾದ ಐಕ್ಯ ಪ್ರಜಾಸತ್ತಾತ್ಮಕ ಸ್ವಪರಿಪೂರ್ಣ ಸಮಾಜ ನಿರ್ಮಾಣದ ಪ್ರತಿಜ್ಞೆ ಕೈಗೊಂಡಿದೆ.

ಸಾರ್ವಜನಿಕ ಸಂಪರ್ಕ ಮತ್ತು ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರು, ತ್ರಿಪುರಾ ಸರಕಾರ, ಅಗರ್ತಲಾ ಇವರಿಂದ ಪ್ರಕಟಿತ.

Issued by Directorate of Public Relations and Tourism, Government of Tripura, Agartala.
No. F. 65 (29)-Pub/79, Dated 28th April, 1980.

ಜಾತಿ ಪದ್ಧತಿಯ ಹುಟ್ಟು ಬೆಳವಣಿಗೆ :

ಒಂದು ಸ್ಥೂಲ ವಿವರಣೆ

ಕೆ. ವೇದ

ನಮ್ಮ ಸಮಾಜದಲ್ಲಿ ಎದ್ದು ಕಾಣುವ ಒಂದು ಅಂಶ ಜಾತಿ ಪದ್ಧತಿ. ಜಾತಿಪದ್ಧತಿಯೆಂದರೆ ಮೇಲು-ಕೀಳಿನ ಭಾವನೆಯಿಂದ ಕೂಡಿದ ಒಂದು ವ್ಯವಸ್ಥೆ. ಮೇಲು ಎನಿಸಿಕೊಂಡ ಜಾತಿಯವರು ಕೀಳು ಎನಿಸಿಕೊಂಡ ಜಾತಿಯವರಿಂದ ಆಹಾರ ಸ್ವೀಕರಿಸುವುದಿಲ್ಲ; ಮದುವೆ ಇತ್ಯಾದಿ ಸಾಂಪ್ರದಾಯಿಕ ವ್ಯವಹಾರ ನಡೆಸುವುದಿಲ್ಲ. ಒಂದೇ ಸಮಾಜದಲ್ಲಿದ್ದರೂ ಒಂದೇ ರೀತಿ ಕಷ್ಟ ಅನುಭವಿಸುತ್ತಿದ್ದರೂ ಪ್ರತ್ಯೇಕವೆಂಬಂತೆ ಬದುಕುತ್ತಾರೆ. ಶೋಷಣೆಯ ವಿರುದ್ಧ ಹೋರಾಟದಲ್ಲಿ ಜಾತಿಪದ್ಧತಿಯ ಪ್ರಭಾವದ ಬಗ್ಗೆ ಬಹಳ ವಾದ-ವಿವಾದಗಳಿವೆ. ವರ್ಗಹೋರಾಟದಲ್ಲಿ ಈ ಪ್ರಭಾವ ತೀರಾ ಕಡಿಮೆಯೆಂದು ಕೆಲವರೆಂದರೆ ಭಾರತದಲ್ಲಿ ವರ್ಗಹೋರಾಟಕ್ಕಿಂತ ಜಾತಿಯ ಅಸಮಾನತೆಯ ವಿರುದ್ಧ ಹೋರಾಟ ಮುಖ್ಯ ಎಂದು ಇನ್ನು ಕೆಲವರೆನ್ನುತ್ತಾರೆ. ಭಾರತದಲ್ಲಿ ಜಾತಿ ಪದ್ಧತಿ ಹೇಗೆ ಹುಟ್ಟಿತು, ಯಾವ ರೀತಿ ಈಗಿನ ರೂಪ ಪಡೆಯಿತು ಎಂದು ತಿಳಿದರೆ ಶೋಷಣೆಯ ವಿರುದ್ಧ ಹೋರಾಟದಲ್ಲಿ ಜಾತಿಯ ಸರಿಯಾದ ಪಾತ್ರ ಏನು ಎಂದು ನಿರ್ಧರಿಸಲು ಸಹಾಯಕವಾದೀತು.

ಪುರಾಣ ಇತ್ಯಾದಿ ಧರ್ಮಗ್ರಂಥಗಳು ಹೇಳುವಂತೆ ಜಾತಿ ದೇವರ ಸೃಷ್ಟಿಯೇನೂ ಅಲ್ಲ. ಅದು ಅನಾದಿಕಾಲದಿಂದ ಇತ್ತು ಎನ್ನುವುದೂ ಸರಿಯಲ್ಲ. ನಮ್ಮ ಸಮಾಜ ಬೆಳವಣಿಗೆಯ ಒಂದು ಹಂತದಲ್ಲಿ ಅದು ಹುಟ್ಟಿಕೊಂಡಿತು. ಇದನ್ನು ತಿಳಿಯಲು ನಾವು ಇತಿಹಾಸದ ಅಧ್ಯಯನ ಮಾಡಬೇಕಾಗುತ್ತದೆ. ಇಲ್ಲಿ ಇತಿಹಾಸವೆಂದರೆ ರಾಜರುಗಳ, ಯುದ್ಧಗಳ ಪಟ್ಟಿಯಲ್ಲ; ಉತ್ಪಾದನೆಯ ವಿಧಾನಗಳು ಮತ್ತು ಉತ್ಪಾದನೆಯ ಸಂಬಂಧಗಳಲ್ಲಿ ಹಂತಹಂತವಾಗಿ ಆದ ಬದಲಾವಣೆಗಳನ್ನು ಸಮಯಾನುಕ್ರಮವಾಗಿ ಪ್ರಸ್ತುತಪಡಿಸುವುದೇ ಇತಿಹಾಸ.

ಬುಡಕಟ್ಟುಗಳಿಂದವರ್ಗ ಸಮಾಜಕ್ಕೆ

ನಾವು ಈಗ ನಿರ್ದಿಷ್ಟ ಪ್ರದೇಶಗಳಲ್ಲಿ ನೆಲೆಯಾಗಿರುವ ಸಮಾಜಗಳನ್ನು ಕಾಣುತ್ತಿದ್ದೇವೆ. ಆದರೆ ಮೊದಲಿಂದಲೂ ಇದೇ ರೀತಿಯಲ್ಲಿರಲಿಲ್ಲ. ಭೂಮಿಯಿಂದ ಮನುಷ್ಯನೇ ಸ್ವತಃ ತನಗೆ ಬೇಕಾದ ಆಹಾರ ಉತ್ಪಾದಿಸುವುದನ್ನು ಕಲಿತ ಮೇಲೆ ಇಂತಹ ಸಮಾಜಗಳು ಹುಟ್ಟಿಕೊಂಡವು. ಇದಕ್ಕೆ ಮೊದಲು ಅಂದರೆ ಸುಮಾರು 5-6 ಸಾವಿರ ವರ್ಷಗಳ ಹಿಂದೆ ವ್ಯವಸಾಯದ, ಕಬ್ಬಿಣ ಹಿತ್ತಾಳೆ ಮೊದಲಾದ ಲೋಹಗಳ ಪರಿಚಯವಿಲ್ಲದ ಮನುಷ್ಯರು ಪ್ರಕೃತಿಯಲ್ಲಿ ಸಿಗುವ ಹಣ್ಣು ಹಂಪಲು, ಸಸ್ಯ, ಪ್ರಾಣಿ ಇತ್ಯಾದಿ ಆಹಾರ ಸಂಗ್ರಹಿಸುತ್ತಾ ಗುಂಪುಗಳಲ್ಲಿ ಅಲೆಯುತ್ತಿದ್ದರು. ಇಂತಹ ಆಹಾರ ಸಂಗ್ರಹ ತೀರಾ ಕಮ್ಮಿಯಿದ್ದು ಅನಿಶ್ಚಿತವೂ ಆಗಿತ್ತು. ಸಂಗ್ರಹಿಸಿದ ಗುಂಪು ಅದನ್ನು ತನ್ನಲ್ಲಿ ಹಂಚಿಕೊಳ್ಳುತ್ತಿತ್ತು. ಈ ಗುಂಪುಗಳಿಗೆ 'ಕುಲ' (clan)ಗಳು ಎಂದು ಹೆಸರು. ಬೇರೆಬೇರೆ ಕಡೆ ಅಲೆದಾಡುತ್ತಿದ್ದ ಪ್ರತಿಯೊಂದು ಕುಲವೂ ಯಾವುದಾದರೊಂದು ಆಹಾರ ಸಂಗ್ರಹದಲ್ಲಿ ವಿಶೇಷ ನಿಪುಣತೆ ಪಡೆದಿರುತ್ತಿತ್ತು. ಕ್ರಮೇಣ ಕುಲಗಳು ಒಂದರೊಡನೊಂದು ಸಂಪರ್ಕಕ್ಕೆ ಬಂದಾಗ ತಮ್ಮ ವಿಶೇಷ ಆಹಾರಗಳ ವಿನಿಮಯದಿಂದ ಮತ್ತು ಮದುವೆಯ ರೂಪದಲ್ಲಿ ಸದಸ್ಯರ ವಿನಿಮಯದಿಂದ ಹೊಸ ಸಂಬಂಧಗಳು ಏರ್ಪಟ್ಟವು. ಈ ರೀತಿ ವಿನಿಮಯದಿಂದ ಸಂಪರ್ಕಕ್ಕೆ ಬಂದ ಕುಲಗಳು ಒಟ್ಟಾಗಿ 'ಬಣ' ಅಥವಾ ಬುಡಕಟ್ಟು(tribe)ಗಳಾದವು. ಇವೇ ಆಗಿನ ಕಾಲದ ಸಮಾಜಗಳು. ಈ ಸಮಾಜಗಳಲ್ಲಿ ಈಗಿನ ರೀತಿಯ ಅಸಮಾನತೆಯಿರಲಿಲ್ಲ. ಆದರೆ ಎಲ್ಲರಿಗೂ ಸಾಕಾಗುವಷ್ಟು ಆಹಾರವೂ ಇರಲಿಲ್ಲ. ಬುಡಕಟ್ಟು ಸಮಾಜಗಳ ಸಂಘಟನೆಯ ಒಂದು ಮುಖ್ಯ ಲಕ್ಷಣವೆಂದರೆ ಇವುಗಳ ಸದಸ್ಯರು ತಮ್ಮ ಕುಲಗಳ ಹೊರಗೇ ಆದರೆ ಬುಡಕಟ್ಟುಗಳ ಒಳಗೇ ಮದುವೆಯಾಗುತಿದ್ದರು. ತಮ್ಮ ಸುತ್ತಮುತ್ತಲಿನ ಪರಿಸರದ ಬಗ್ಗೆ ತೀರಾ ಕಮ್ಮಿ ಜ್ಞಾನವಿದ್ದ ಆ ಸಮಯದಲ್ಲಿ ಪ್ರಕೃತಿಯನ್ನು ಹತೋಟಿಯಲ್ಲಿಡುವ ಪ್ರಯತ್ನವಾಗಿ ಬಲಿ, ಮಾಟ-ಮಂತ್ರ ಮತ್ತು ಮುಂದೆ ಧಾರ್ಮಿಕ ರೂಪ ಪಡೆದ ಇತರ ಸಂಪ್ರದಾಯಗಳು ಹುಟ್ಟಿಕೊಂಡವು. ಅಲೆದಾಡುತ್ತಾ ಆಹಾರ ಸಂಗ್ರಹಿಸುತ್ತಿದ್ದ ಬಣಗಳಿಗೆ ಆಹಾರ ಸಂಗ್ರಹ ಸುಲಭದ ಕೆಲಸವೇನೂ ಆಗಿರಲಿಲ್ಲ. ಅಲ್ಲದೆ ಕೆಲವು ಪ್ರದೇಶಗಳಲ್ಲಿ ಕನಿಷ್ಟ ಆಹಾರವೂ ಸಿಗುತ್ತಿರಲಿಲ್ಲ. ಮೊದಲಿಗೆ ಕೃಷಿ ಮೂಲಕ ಆಹಾರ ಉತ್ಪಾದಿಸುವ ಬಣಗಳು ನೆರೆಮಣ್ಣಿನ ಮರುಭೂಮಿಯ ಹತ್ತಿರದ ಪ್ರದೇಶಗಳಲ್ಲಿ ನೆಲೆಸಿದವು. ಆದರೆ ಈ ರೀತಿ ಕೃಷಿ ಮೂಲಕ ಆಹಾರ ಉತ್ಪಾದಿಸುವ ಪದ್ಧತಿ ಎಲ್ಲಾ ಕಡೆಗೆ ಹರಡಬೇಕಾದರೆ ಕಬ್ಬಿಣದ ಶೋಧವಾಗುವವರೆಗೆ ಕಾಯಬೇಕಿತ್ತು. ಯಾಕೆಂದರೆ ಕಬ್ಬಿಣದ ಸಹಾಯವಿಲ್ಲದೆ ದಟ್ಟ ಅರಣ್ಯಗಳನ್ನು, ಗಟ್ಟಿ ಮಣ್ಣಿನ ಭೂಮಿಯನ್ನು ಕೃಷಿಯೋಗ್ಯ ಮಾಡುವುದು ಸಾಧ್ಯವಿರಲಿಲ್ಲ. ಕಬ್ಬಿಣ ಮುಂತಾದ ಲೋಹಗಳ ಶೋಧದೊಡನೇ ಲೋಹದ ಅದುರುಗಳ ಮತ್ತು ನೀರಿನ ಮೂಲಗಳ ಒಡೆತನಕ್ಕಾಗಿ ಬಣಗಳ ನಡುವೆ ಜಗಳಗಳು ಆರಂಭವಾದವು. ಪ್ರತಿಯೊಂದು ಹೊಸ ಉತ್ಪಾದನಾ ವಿಧಾನದಿಂದ ಆಹಾರ ಪೂರೈಕೆ ಹೆಚ್ಚಾದರೆ ಅದರ ಪರಿಣಾಮವಾಗಿ ಜನಸಂಖ್ಯೆಯಲ್ಲಿ ಒಮ್ಮೆಲೇ ವೃದ್ಧಿಯಾಗುತ್ತದೆ. ಆಗ ಮನುಷ್ಯ-ಮನುಷ್ಯರ ನಡುವಿನ ಸಂಬಂಧಗಳೂ ಬದಲಾಗಬೇಕಾಗುತ್ತದೆ. ಕೃಷಿಯಿಂದ ಆಹಾರ ಪೂರೈಕೆ ಹೆಚ್ಚಾಗಿ ಹಿಂದಿನ ಅಲೆಮಾರಿ ಬಣಗಳ ಸಂಘಟನೆಗಳು ನಿರುಪಯೋಗಿಯಾದವು. ಬಣಗಳಲ್ಲಿ ಶ್ರಮವಿಭಜನೆ ಮತ್ತು ಅದರೊಡನೆ ವರ್ಗ ವಿಭಜನೆಗಳು ಕಾಣಿಸಿಕೊಂಡವು. ಪ್ರಾರಂಭಾವಸ್ಥೆಯ ಬಣಗಳಲ್ಲಿ ಹುಟ್ಟಿಕೊಂಡಿದ್ದ ಮಾಟ-ಮಂತ್ರ, ಬಲಿ ಇತ್ಯಾದಿ ಆಚರಣೆಗಳನ್ನು ಮೊದಲು ಬಣದ ಮುಖ್ಯಸ್ಥನೇ ಮಾಡುತ್ತಿದ್ದ. ಬಣಗಳ ಜನಸಂಖ್ಯೆ ಹೆಚ್ಚಿದಂತೆ ವರ್ಗ ವಿಭಜನೆಯಾದಾಗ ಈ ಕೆಲಸವನ್ನು ಮಾಡಲು ಒಂದು ಪುರೋಹಿತ ವರ್ಗ ಹುಟ್ಟಿಕೊಂಡಿತು. ಬಣಗಳ ನಡುವಿನ ಹೋರಾಟಗಳಲ್ಲಿ ನಿಪುಣತೆ ಪಡೆದ ಇನ್ನೊಂದು ವರ್ಗ ಹುಟ್ಟಿಕೊಂಡಿತು. ಈ ಎರಡು ವರ್ಗಗಳ ಮೇಲ್ವಿಚಾರಣೆಯಲ್ಲಿ ಉಳಿದ ಬಹುಸಂಖ್ಯಾತ ಸದಸ್ಯರು ನಿಜವಾದ ಆಹಾರೋತ್ಪಾದನೆಯಲ್ಲಿ ತೊಡಗಿದ ಶ್ರಮಜೀವಿಗಳಾದರು,

ಭಾರತದಲ್ಲಿ ವಿಶಿಷ್ಟ ಬೆಳವಣಿಗೆಗೆ ಕಾರಣ :

ಇದು ಸಾಮಾಜಿಕ ಬೆಳವಣಿಗೆಯ ಸ್ಥೂಲವಿವರ ಭಾರತವು ಇದಕ್ಕೆ ಅಪವಾದವಾಗಿರಲಿಲ್ಲ ಹಾಗಾದರೆ ಭಾರತದಲ್ಲಿ ಈ ಬೆಳವಣಿಗೆ ನಾವು ಈಗ ಕಾಣುವ ವಿಶಿಷ್ಟತೆ ಪಡೆಯಲು ಕಾರಣವೇನು? ಮೊದಲನೆಯದಾಗಿ ಆಹಾರ ಸಂಗ್ರಹಣೆ ಯುರೋಪಿನಂತಹ ಚಳಿಪ್ರದೇಶಗಳಿಗಿಂತ ಭಾರತದಲ್ಲಿ ಸುಲಭವಾಗಿತ್ತು. ಭಾರತದ ಒಂದು ಸಣ್ಣ ಪ್ರದೇಶದಲ್ಲಿ ಸಿಗುವಷ್ಟು ವಿಧದ ಆಹಾರ ಧಾನ್ಯಗಳು, ಸಸ್ಯಗಳು ಇಡೀ ಯುರೋಪುಖಂಡದಲ್ಲಿ ಸಿಗುತ್ತಿರಲಿಲ್ಲ. ಇದರಿಂದ ಕೃಷಿಯಿಂದ ಆಹಾರ ಉತ್ಪಾದಿಸುವುದು ಇಲ್ಲಿ ಯುರೋಪಿನಷ್ಟು ಅವಶ್ಯಕವೇನೂ ಆಗಿರಲಿಲ್ಲ. ಎರಡನೇಯದಾಗಿ ಭಾರತ ಭೌಗೋಳಿಕವಾಗಿ ಬಹಳ ವಿಭಿನ್ನತೆಯಿರುವ ಪ್ರದೇಶ. ಹವಾಮಾನದಲ್ಲೂ ಬಹಳ ವಿಭಿನ್ನತೆಯಿದೆ. ಇದರಿಂದಾಗಿ ನಮ್ಮ ದೇಶದ ಒಂದು ಕಡೆ ಕೃಷಿಮೂಲಕ ಉತ್ಪಾದನೆ ಪ್ರಾರಂಭಿಸಿದ್ದರೆ ಇನ್ನೊಂದು ಕಡೆಗೆ ಇನ್ನೂ ಹಿಂದಿನಂತೆ ಆಹಾರ ಸಂಗ್ರಹಿಸುತ್ತಾ ಬದುಕುವುದು ಸಾಧ್ಯವಿತ್ತು,

ವರ್ಣವ್ಯವಸ್ಥೆ — ಜಾತಿಪದ್ಧತಿಯ ಮೂಲ :

ಸುಮಾರು 4000 ವರ್ಷಗಳ ಹಿಂದೆ ಭಾರತದ ಮೊದಲ ಕೃಷಿಯಿಂದ ಆಹಾರೋತ್ಪಾದಿಸುವ ಸಮಾಜ ಸಿಂಧೂನದಿಯ ಕಣಿವೆಯ ಪ್ರದೇಶದಲ್ಲಿ ರೂಪಗೊಂಡಿತು. ಆಗ ಗಂಗಾತೀರದ ಪ್ರದೇಶದಲ್ಲಿ ಮತ್ತು ದಕ್ಷಿಣಭಾರತದಲ್ಲಿ ಬಣಗಳು ಇನ್ನೂ ಆಹಾರಸಂಗ್ರಹಣೆಯ ಹಂತದಲ್ಲೇ ಇದ್ದವು. ಕಬ್ಬಿಣದ ಶೋಧ ಇನ್ನೂ ಆಗಿರಲಿಲ್ಲವಾದ್ದರಿಂದ ಈ ಸಂಸ್ಕೃತಿ ಬೇರೆ ಪ್ರದೇಶಕ್ಕೆ ಹರಡಲಿಲ್ಲ. ಸುಮಾರು ಕ್ರಿ. ಪೂ. 1800-1700ರಲ್ಲಿ ವಾಯುವ್ಯದಿಂದ ಭಾರತವನ್ನು ಪ್ರವೇಶಿಸಿದ ಆರ್ಯರ ಪಶುಪಾಲಕ ಬಣಗಳು ಈ ಸಂಸ್ಕೃತಿಯನ್ನು ನಾಶಗೊಳಿಸಿರಬಹುದು. ಆದರೂ ಆರ್ಯರು ಭಾರತದಲ್ಲಿ ಹೊಸದೊಂದು ವ್ಯಾಪಕವಾದ ಸಮಾಜ ಹುಟ್ಟಿಕೊಳ್ಳಲು ಕಾರಣರಾದರು. ಅಲ್ಲಲ್ಲಿ ಹರಡಿಕೊಂಡಿದ್ದ ಪ್ರತ್ಯೇಕವಾಗಿ ಬದುಕುತ್ತಿದ್ದ ಬಣಗಳ ಬೇರೆ ಬೇರೆ ರೀತಿಯ ನಿಪುಣತೆ ಮತ್ತು ಜ್ಞಾನ ಆರ್ಯರಿಂದಾಗಿ ಎಲ್ಲರಿಗೂ ಸಿಗುವಂತಾಯಿತು. ಆರ್ಯರು ಮತ್ತು ಇಲ್ಲಿಯ ಮೂಲ ನಿವಾಸಿ ಬಣಗಳ, ಹಳೆಯದರ ಮತ್ತು ಹೊಸದರ ಮಿಶ್ರಣದಿಂದ ಹೊಸದೊಂದು ವಿಶಾಲ ಸಮಾಜ ರೂಪುಗೊಂಡಿತು. ಸಿಂಧೂ ಕಣಿವೆಯ ಸಂಸ್ಕೃತಿಯಲ್ಲಿ ವರ್ಗ ವಿಭಜನೆ ಇತ್ತು. ಆದರೆ ಜಾತಿ ಪದ್ಧತಿ ಇರಲಿಲ್ಲ. ಪೂರ್ವಕ್ಕೆ ಹೊರಟ ಆರ್ಯರ ಬಣಗಳಲ್ಲಿ ವರ್ಗ ವಿಭಜನೆ ಇರಲಿಲ್ಲ. ಆದರೆ ಆರ್ಯರು ತಾವು ಗೆದ್ದುಕೊಂಡ ಸಿಂಧು ಕಣಿವೆಯ ಹಾಗೂ ಇತರ ಮೂಲ ನಿವಾಸಿಬಣಗಳ ಸದಸ್ಯರನ್ನು ತಮ್ಮ ಬಣಗಳಿಗೆ ಸೇರಿಸಿಕೊಂಡದ್ದರಿಂದ ಆರ್ಯರ ಬಣಗಳ ಒಳಗೇ ಎರಡು ವಿಭಾಗಗಳಾದವು-ಆರ್ಯರು ಮತ್ತು ದಾಸರು. ಇದೇ ಪ್ರಾರಂಭದ ವೈದಿಕ ಸಮಾಜದ ವರ್ಣ ಪದ್ಧತಿ. ಇದು ಈಗಿನ ಜಾತಿ ಪದ್ಧತಿಗಿಂತ ಭಿನ್ನವಾಗಿದ್ದರೂ ಜಾತಿ ಪದ್ಧತಿಯ ಮೂಲವನ್ನು ಇದರಲ್ಲಿ ಕಾಣಬಹುದು. ಇದಾದ 1000 ವರ್ಷಗಳ ನಂತರ 4 ಜಾತಿಗಳಿರುವ ಜಾತಿ ಪದ್ಧತಿ ಆರಂಭವಾಗಿರಬಹುದು. ಆರ್ಯರ ಬಣಗಳ ಇನ್ನೊಂದು ಗುಂಪು ವಾಯುವ್ಯದಿಂದ ಭಾರತದೊಳಗೆ ಇದೇ ಸಮಯದಲ್ಲಿ ಪ್ರವೇಶಿಸಿತು. ಇವರಿಗೆ ತಮ್ಮ ಪೂರ್ವಜರಾದ ಆರ್ಯರಿಗೆ ಸಿಕ್ಕಂತೆ ಬೆಳೆದು ನಿಂತ ನಾಗರಿಕತೆಯನ್ನು ದೋಚುವ ಅವಕಾಶ ಇರಲಿಲ್ಲ. ಆದರೆ ಅವರಿಗಿಲ್ಲದ ಒಂದು ವಿಶೇಷ ಅನುಕೂಲತೆ ಇವರಿಗಿತ್ತು, ಅದೆಂದರೆ ಲೋಹದ ಜ್ಞಾನ. ಇದರಿಂದಾಗಿ ಇವರು ಇನ್ನೂ ಪೂರ್ವದ ಕಡೆಗೆ-ಗಂಗಾನದಿ ಬಯಲ ಕಡೆಗೆ ಹೊರಟರು. ಕೃಷಿ ಮಾಡಲು ಬೇಕಾದಷ್ಟು ಭೂಮಿ ಇತ್ತು. ದಟ್ಟವಾಗಿ ಬೆಳೆದ ಅರಣ್ಯಗಳನ್ನು ಕಡಿದು ಕೃಷಿಯೋಗ್ಯಮಾಡಲು ಬೇಕಾದ ಲೋಹದ ಜ್ಞಾನ ಆರ್ಯರ ಈ ಎರಡನೇ ಗುಂಪಿನಲ್ಲಿತ್ತು. ಆದರೆ ಇದು ಸಾಧ್ಯವಾಗಬೇಕಾದರೆ ಹೊಸದೊಂದು ಸಾಮಾಜಿಕ ಸಂಘಟನೆಯ ಅಗತ್ಯವಿತ್ತು. ಇದನ್ನು ಸಾಧ್ಯವಾಗಿಸಿದ ಸಂಘಟನೆಯೇ ಜಾತಿ.

ಜಾತಿಪದ್ಧತಿಯ ಬೆಳವಣಿಗೆ:

ಈ ರೀತಿ ಜಾತಿಯನ್ನು ಆರಂಭದ ಹಂತದಲ್ಲಿದ್ದ ಉತ್ಪಾದನಾ ವ್ಯವಸ್ಥೆಯಲ್ಲಿ ರೂಪುಗೊಂಡ ವರ್ಗ ವಿಭಜನೆ ಎನ್ನಬಹುದು. ಅಂದರೆ ಈಗ ನಾವು ಕಾಣುವ ಜಾತಿ ಪದ್ಧತಿ ಆರಂಭವಾದದ್ದು ಒಂದು ವರ್ಗ ವ್ಯವಸ್ಥೆಯಾಗಿಯೇ. ಆರ್ಯ ಬಣಗಳು ತಮ್ಮ ಅಲೆಮಾರಿ ಜೀವನವನ್ನು ಬಿಟ್ಟು ಕೃಷಿ ಮೂಲಕ ಆಹಾರೋತ್ಪಾದನೆಗೆ ತೊಡಗಿದ ಮೇಲೆ ಅವರ ಬಣಗಳೊಳಗೇ ಈ ಹಿಂದೆ ವಿವರಿಸಿದಂತೆ ವರ್ಗವಿಭಜನೆ ರೂಪುಗೊಂಡು ಬ್ರಾಹ್ಮಣ ಪುರೋಹಿತ ವರ್ಗ, ಕ್ಷತ್ರಿಯ ವರ್ಗ ಮತ್ತು ನಿಜವಾದ ಆಹಾರೋತ್ಪಾದನೆಯಲ್ಲಿ ತೊಡಗಿದ್ದ ವೈಶ್ಯವರ್ಗ-ಜಾತಿಗಳು ಹುಟ್ಟಿಕೊಂಡವು. ಪ್ರಾರಂಭದ ವೈದಿಕ ಸಮಾಜದ 'ದಾಸರು' ಮತ್ತು ಆರ್ಯರ ಪ್ರಭಾವದಿಂದ ಕೃಷಿಯಲ್ಲಿ ತೊಡಗಿದ ಇತರ ಮೂಲ ನಿವಾಸಿ ಬಣಗಳ ಸದಸ್ಯರು ಹೊಸ ಜಾತಿ ಪದ್ಧತಿಯ ಶೂದ್ರರಾದರು. ಈ ಸಾಮಾಜಿಕ ಸಂಘಟನೆ ಅದುವರೆಗೆ ಅರಣ್ಯವಾಗಿದ್ದ ಪ್ರದೇಶವನ್ನು ಕೃಷಿಯೋಗ್ಯ ಮಾಡಲು ಬೇಕಾದ ಶ್ರಮಶಕ್ತಿಯನ್ನೂ ವೈಶ್ಯ ಮತ್ತು ಶೂದ್ರರ ರೂಪದಲ್ಲಿ ಕೊಟ್ಟರೆ ಶ್ರಮಶಕ್ತಿಯನ್ನು ಕೆಲಸಕ್ಕೆ ಹಚ್ಚುವಂತೆ ನೋಡಿಕೊಳ್ಳಲು ಬ್ರಾಹ್ಮಣ ಮತ್ತು ಕ್ಷತ್ರಿಯ ವರ್ಗ-ಜಾತಿಗಳನ್ನು ಪೂರೈಸಿತು. ಹೊಸ ಹೊಸ ಬಣಗಳು ಆಹಾರ ಸಂಗ್ರಹಣೆಯ ಅಲೆಮಾರಿ ಜೀವನವನ್ನು ಬಿಟ್ಟು ಹೊಸ ಜಮೀನನ್ನು ಕೃಷಿಗೆ ಒಳಪಡಿಸಿದಂತೆ ಆ ಬಣಗಳು ಹೊಸ ವ್ಯವಸ್ಥೆಯಲ್ಲಿ ಬೇರೆಬೇರೆ ಜಾತಿಗಳಾಗಿ ಸೇರಿಕೊಂಡವು. ಅಲ್ಲದೆ ಹಳೆಯ ಬಣಗಳಲ್ಲಿ ಬುಟ್ಟಿಹೆಣೆಯುವುದು, ಮಡಿಕೆ ಮಾಡುವುದು ಇತ್ಯಾದಿ ಕುಶಲ ಕೆಲಸಗಾರರ ವೃತ್ತಿ ಸಂಘ (Guild)ಗಳು ಈ ಹೊಸ ಜಾತಿ ಸಮಾಜದಲ್ಲಿ ಬೇರೆಬೇರೆ ಜಾತಿಗಳಾಗಿ ಸೇರಿಕೊಂಡವು. ಜಾತಿ ಪದ್ಧತಿಯಲ್ಲಿ ಸೈದ್ಧಾಂತಿಕವಾಗಿ ನಾಲ್ಕೇ ಜಾತಿಗಳಿದ್ದರೂ ನಿಜವಾಗಿ ಸಾವಿರಾರು ಜಾತಿಗಳು ನಮ್ಮ ಸಮಾಜದಲ್ಲಿ ಕಂಡುಬರಲು ಇದೇ ಕಾರಣ,

ಆಹಾರ ಸಂಗ್ರಹಿಸುತ್ತಾ ಅಲೆಮಾರಿ ಜೀವನ ನಡೆಸುತ್ತಿದ್ದ ಬಣಗಳನ್ನು ಬಲಪ್ರಯೋಗ ಅಥವಾ ಗುಲಾಮ ಪದ್ಧತಿಯ ಮೂಲಕ ಕೃಷಿಯನ್ನು ಹೊಂದಿಕೊಂಡ ಹೊಸ ಜಾತಿ (ವರ್ಗ) ಸಮಾಜದಲ್ಲಿ ಸೇರುವಂತೆ ಮಾಡುವುದು ಸಾಧ್ಯವಿರಲಿಲ್ಲ ಯಾಕೆಂದರೆ ಭಾರತದಂತಹ ವಿಶಾಲವಾದ, ಸಸ್ಯ ಸಂಪತ್ತು ಹೇರಳವಾ

ಗಿದ್ದ ಪ್ರದೇಶದಲ್ಲಿ ಕೃಷಿ ಪದ್ಧತಿಯನ್ನು ಒಪ್ಪದೆ ಅದರಿಂದ ದೂರ ಹೋಗಿ ಆಹಾರ ಸಂಗ್ರಹಿಸಿಕೊಂಡೇ ಇರುವುದು ಸಾಧ್ಯವಿತ್ತು. ಇಂತಹ ಪರಿಸ್ಥಿತಿಯಲ್ಲಿ ಅವರು ವರ್ಗ ಸಮಾಜಕ್ಕಾಗಿ ಆಹಾರೋತ್ಪಾದನೆ ಮಾಡಲು ಒಪ್ಪಬೇಕಾದರೆ ಬಲಪ್ರಯೋಗದ ಬದಲು ಕಂದಾಚಾರ, ಮೂಢನಂಬಿಕೆಗಳಿಂದ ಕೂಡಿದ ಧರ್ಮವೇ ಹೆಚ್ಚು ಸಹಕಾರಿಯಾಯಿತು. ಬ್ರಾಹ್ಮಣ ಜಾತಿ ಈ ಕೆಲಸವನ್ನು ಯಶಸ್ವಿಯಾಗಿ ಸಾಧಿಸಿತು. ಬಣಗಳ ಮಾಟ-ಮಂತ್ರ, ಬಲಿ ಇತ್ಯಾದಿ ಕಂದಾಚಾರಗಳಿಂದ ಕೂಡಿದ ಸಂಸ್ಕೃತಿಯ ಅಂಶಗಳನ್ನು ತಾವೂ ಸ್ವೀಕರಿಸಿ ಸಾಂಸ್ಕೃತಿಕ ವಿನಿಮಯದ ಮೂಲಕ ಮತ್ತು ಈ ಬಣಗಳ "ವೈಭವಪೂರ್ಣ ಪರಂಪರೆ"ಯ ಸುಳ್ಳು ಕಥೆಗಳನ್ನು ಹೆಣೆದು ತಮ್ಮ ಪುರಾಣ ಕಥೆಗಳಿಗೆ ಸೇರಿಸಿ ಈ ಬಣಗಳು ಜಾತಿ ಸಮಾಜಕ್ಕೆ ಸೇರುವಂತೆ ಬ್ರಾಹ್ಮಣ ಪುರೋಹಿತವರ್ಗ ನೋಡಿಕೊಂಡಿತು. ಕೃಷಿ ಬಗ್ಗೆ ತನಗಿದ್ದ ಅನುಭವದ ಮೂಲಕ ಗಂಗಾ ಬಯಲಿನ ಬ್ರಾಹ್ಮಣ ಜಾತಿ ದಕ್ಷಿಣ ಭಾರತದಲ್ಲಿ ಕೃಷಿಯನ್ನೂ ಅದರ ಜೊತೆಗೆ ಜಾತಿ ಪದ್ಧತಿಯನ್ನೂ ಹರಡಿತು. ಇಲ್ಲಿನ ಬಣಗಳ ಮುಖ್ಯಸ್ಥರನ್ನು 'ಹಿರಣ್ಯಗರ್ಭ' ಮುಂತಾದ ತಮ್ಮ ಧಾರ್ಮಿಕ ಸಂಪ್ರದಾಯಗಳ ಮೂಲಕ ರಾಜರನ್ನಾಗಿಮಾಡಿ ಅವರ'ಹಿರಿಮೆಯ' ಬಗ್ಗೆ ಕಥೆಗಳನ್ನು ಹೆಣೆದು ಅವರ ಬಣಗಳ ಇತರ ಸಾಮಾನ್ಯ ಸದಸ್ಯರನ್ನು ಆಹಾರೋತ್ಪಾದನೆ ಮಾಡುವ ಜಾತಿಗಳಾಗಿ ಸೇರಿಸಿಕೊಂಡಿತು. ಹೀಗೆ ಸೇರಿಕೊಂಡ ಜಾತಿಗಳು ತಮ್ಮ ಹಿಂದಿನ ಬಣಗಳ ಎಲ್ಲಾ ಸಂಪ್ರದಾಯ ಮತ್ತು ಮೂಢನಂಬಿಕೆಗಳನ್ನು ಮತ್ತು ಪ್ರತ್ಯೇಕತೆಯನ್ನು ಹೊಸ ಸಮಾಜದಲ್ಲೂ ಮುಂದುವರಿಸಿಕೊಂಡು ಹೋಗಲು ಅವಕಾಶವಾದಂತಾಯಿತು ಜಾತಿ ಒಳಗೇ ಮದುವೆ, ಆಹಾರ ಸ್ವೀಕರಿಸುವ ಬಗ್ಗೆ ಕಟ್ಟುಪಿಟ್ಟು ಈಗಲೂ ಇರುವುದು ಇದಕ್ಕೆ ಉದಾಹರಣೆ. ಈ ರೀತಿ ಮೂಢನಂಬಿಕೆಗಳ ಸಹಾಯದಿಂದ ಹೊಸದೊಂದು ಹೆಚ್ಚು ದಕ್ಷವಾದ ವರ್ಗ ಸಮಾಜವನ್ನು ಅಸ್ತಿತ್ವಕ್ಕೆ ತರುವುದರಲ್ಲಿ ಬ್ರಾಹ್ಮಣ ಜಾತಿ ಯಶಸ್ವಿಯಾದರೂ ಮುಂದೆ ಇದೇ ಭಾರತದ ದುರ್ಗತಿಗೂ ಕಾರಣವಾಯಿತು. ಮೊದಲು ಪ್ರಗತಿಪರವಾದ ವರ್ಗ ಸಮಾಜವನ್ನು ಆರಂಭಿಸಲು ಕಾರಣವಾದ ಜಾತಿಪದ್ಧತಿ ನಂತರ ಭಾರತೀಯ ಸಮಾಜದ ಮುಂದಿನ ಬೆಳವಣಿಗೆಯನ್ನೇ ಕುಂಠಿತಗೊಳಿಸಿತು. ಪ್ರಾರಂಭದಲ್ಲಿ ಗಣಿತ ಆಯುರ್ವೇದ ಇತ್ಯಾದಿಗಳಲ್ಲಿ ಜಗತ್ತಿನ ಗಮನ ಸೆಳೆದ ಭಾರತ ನಂತರ ಅರ್ಥವಿಲ್ಲದ ಕಂದಾಚಾರಗಳಲ್ಲಿ ಸಿಕ್ಕಿಕೊಂಡು ವಿದೇಶಿಯರೆದುರು ತಲೆತಗ್ಗಿಸಿತು. ಇದೇ ಜಾತಿ ಪದ್ಧತಿಯನ್ನು ಉಪಯೋಗಿಸಿ ಚಾಣಕ್ಯ ತಂತ್ರಗಳ ಮೂಲಕ ಅಸ್ತಿತ್ವಕ್ಕೆ ಬಂದ ಹಳ್ಳಿಗಳು ಇದೇ ಕೆಲಸವನ್ನು ಮಾಡಿದವು.

ಬೂರ್ಜ್ವಾ ವ್ಯವಸ್ಥೆಯಲ್ಲಿ ಜಾತಿ :

ಸಾಮಾನ್ಯವಾಗಿ ಹೊಸ ಆರ್ಥಿಕೋತ್ಪಾದನೆಯ ವಿಧಾನಕ್ಕನುಗುಣವಾಗಿ ಮನುಷ್ಯರ ನಡುವಿನ ಸಂಬಂಧಗಳು ಬದಲಾಗುತ್ತವೆ. ಆದರೆ ಇಂತಹ ಬದಲಾವಣೆಗೆ ಸ್ವಲ್ಪ ಕಾಲ ಬೇಕಾಗುತ್ತದೆ. ಭಾರತದಲ್ಲಿ ಹೊಸವ್ಯವಸ್ಥೆ ಹಳೆಯ ಪದ್ಧತಿಯೊಂದಿಗೆ ಒಪ್ಪಂದ ಮಾಡಿಕೊಂಡೇ ಹುಟ್ಟಿದ್ದರಿಂದ ಹಳೆಯ ನಂಬಿಕೆಗಳು ಬದಲಾಗದೆ ಅದೇ ರೂಪದಲ್ಲೋ ಹೊಸರೂಪದಲ್ಲೋ ಮುಂದುವರೆದವು. ಯುರೋಪಿನಲ್ಲಿ ಹಳೆಯ ವ್ಯವಸ್ಥೆಯನ್ನು ಮೂಲೋತ್ಪಾಟನೆ ಮಾಡಿದ ಬಂಡವಾಳಶಾಹಿ ಕೈಗಾರಿಕಾ ವ್ಯವಸ್ಥೆಯೂ ಭಾರತದ ಹಳೆಯ ವ್ಯವಸ್ಥೆಗೆ (ಮತ್ತು ಅದರ ಅಂಗವಾದ ಜಾತಿಪದ್ಧತಿಗೆ) ಸಾಕಷ್ಟು ಧಕ್ಕೆ ತಂದರೂ ಬೇರೊಂದು ದೇಶದಲ್ಲಿ ಅಧಿಕಾರ ನಡೆಸಬೇಕಾದ ಬ್ರಿಟಿಷ್ ಬಂಡವಾಳಶಾಹಿವರ್ಗ ಇಲ್ಲಿನ ಆಳುವ ವರ್ಗ (ಮತ್ತು ಅವರ ವ್ಯವಸ್ಥೆಯಾದ ಜಾತಿಪದ್ಧತಿ ಇತ್ಯಾದಿಗಳು) ದೊಂದಿಗೆ ಒಪ್ಪಂದ ಮಾಡಿಕೊಂಡಿತು. ಅಲ್ಲದೆ ಭಾರತದಲ್ಲಿ ಈ ಸಮಯದಲ್ಲಿ ಹುಟ್ಟಿಕೊಂಡ ಬಂಡವಾಳಶಾಹಿ ವರ್ಗದ ನಾಯಕರೂ ಬ್ರಿಟಿಷ್‌ರನ್ನು ಭಾರತದಿಂದ ಓಡಿಸಲು ನಡೆಸಿದ ಹೋರಾಟದಲ್ಲಿ ಎಲ್ಲಾ ವರ್ಗಗಳ ಬೆಂಬಲ ಪಡೆಯಲು ಭಾರತದ 'ಭವ್ಯ ಪ್ರಾಚೀನ ಪರಂಪರೆ'ಗೆ ಮೊರೆಹೋದರು, ಜಾತಿಪದ್ಧತಿ ಇದೇ 'ಭವ್ಯ ಪರಂಪರೆ'ಯ ಅಂಗವಾಗಿತ್ತು. ಆದ್ದರಿಂದ ಆಧುನಿಕ ಭಾರತದಲ್ಲಿ ರೈಲು, ಕೈಗಾರಿಕೆ, ಆಧುನಿಕ ಶಿಕ್ಷಣ ಪದ್ಧತಿ ಇವೆಲ್ಲಾ ಜಾತಿಪದ್ಧತಿಯನ್ನು ಸಡಿಲಿಸಿದರೂ ಅದಕ್ಕೆ ಸಂಬಂಧಪಟ್ಟ ಸಂಪ್ರದಾಯಗಳು ಮುಂದುವರಿದುಕೊಂಡು ಬರಲು ಅವಕಾಶ ಕೊಟ್ಟವು. ಊಳಿಗಮಾನ್ಯ ವ್ಯವಸ್ಥೆ ಮತ್ತು ಅಪಕ್ವ ಕೃಷಿಯ ವ್ಯವಸ್ಥೆ ಇನ್ನೂ ಉಳಿದಿರುವ ಹಳ್ಳಿಗಳಲ್ಲಿ ಜಾತಿಪದ್ಧತಿ ಇನ್ನೂ ಸಾಕಷ್ಟು ಬಲವಾಗಿದೆ.

ಸ್ವಾತಂತ್ರ್ಯದ ನಂತರದ ಭಾರತದಲ್ಲಿ ಆಳುವ ವರ್ಗಗಳು ಅಧಿಕಾರಕ್ಕಾಗಿ ತಮ್ಮ-ತಮ್ಮಲ್ಲೇ ನಡೆಸುವ ಪೈಪೋಟಿಯಲ್ಲಿ ಜಾತಿಯ ಉಪಯೋಗ ಅವರಿಗೆ ಬಹಳವಾಗಿ ಕಂಡದ್ದರಿಂದ ಜಾತಿ ಸಂಪ್ರದಾಯಗಳು ಇನ್ನೂ ಮುಂದುವರಿಯುತ್ತಿವೆ. ಅಲ್ಲದೆ ಇತ್ತೀಚಿನ ವರ್ಷಗಳಲ್ಲಿ ಬಂಡವಾಳಶಾಹಿ-ಭೂಮಾಲಿಕ ಆಡಳಿತೆಯಲ್ಲಿ ಸಾಮಾನ್ಯ ಜನರ ಕಷ್ಟಗಳು ಹೆಚ್ಚಿ ಶೋಷಣೆಯ ವಿರುದ್ಧ ಸಾಮಾನ್ಯ ಜನರು ಒಟ್ಟಾಗುತ್ತಿರುವಾಗ ಅವರ ಒಗ್ಗಟ್ಟನ್ನು ಮುರಿಯಲು ಜಾತಿ ಭೇದವನ್ನು ಆಳುವ ವರ್ಗಗಳು ಉಪಯೋಗಿಸಿಕೊಳ್ಳುತ್ತಿವೆ.

ಜಾತಿಪದ್ಧತಿಯೂ ಅದರ ಪ್ರಾರಂಭಿಕ ಹಂತದಲ್ಲಿ ವರ್ಗವ್ಯವಸ್ಥೆಯೇ ಆದಿದ್ದುದರಿಂದ ಜಾತಿಪದ್ಧತಿಯ ಎಲ್ಲಾ ಅನಿಷ್ಟಗಳೂ ಸಂಪೂರ್ಣವಾಗಿ ನಾಶವಾಗಬೇಕಾದರೆ ಅದು ವರ್ಗರಹಿತ ಸಮಾಜವಾದೀ ಸಮಾಜದಲ್ಲಿ ಮಾತ್ರ ಸಾಧ್ಯ. ಅಂದರೆ ಸಮಾಜವಾದಿ ಸಮಾಜದಲ್ಲಿ ಬಂದೊಡನೇ ಜಾತಿ ಪದ್ಧತಿ ತನ್ನಷ್ಟಕ್ಕೇ ಮಾಯವಾಗುತ್ತದೆ ಎಂದು ಭಾವಿಸಬೇಕಾಗಿಲ್ಲ. ವರ್ಗ ಸಮಾಜ ಇರುವವರೆಗೆ ಭಾರತದಲ್ಲಿ ಜಾತಿಪದ್ಧತಿಯ ನಿರ್ಮೂಲನ ಆಗುವುದಿಲ್ಲ ಎಂದೇ ಅದರರ್ಥ. ಎಲ್ಲಾ ತರದ ಶೋಷಣೆ, ಅಸಮಾನತೆಗಳನ್ನು ನಿವಾರಿಸಲು ವರ್ಗಹೋರಾಟದ ಮುಂಚೂಣಿಯಲ್ಲಿರುವ ಭಾರತದ ಕಾರ್ಮಿಕ ವರ್ಗದಲ್ಲಿ ಮತ್ತು ಇತರ ಶೋಷಿತ ವರ್ಗಗಳಲ್ಲಿ ಈಗ ಎಲ್ಲಾ 'ಮೇಲು-ಕೀಳು' ಜಾತಿಯವರಿದ್ದಾರೆ. ಮೇಲು-ಕೀಳಿನ ಜಾತಿಭೇದದ ಭ್ರಮೆ ವರ್ಗ ಹೋರಾಟವನ್ನು ದಾರಿತಪ್ಪಿಸದಂತೆ ಅಥವಾ ಮೊಟಕುಗೊಳಿಸದಂತೆ ಜಾತಿಯ ಅಂಗಗಳ ಬಗ್ಗೆ ಕಾರ್ಮಿಕ ವರ್ಗ ಜಾಗರೂಕತೆಯಿಂದಿರಬೇಕಾದದ್ದು ಅನಿವಾರ್ಯ. ಹಾಗೆಯೇ ವರ್ಗ ಹೋರಾಟದೊಡನೆ ಜಾತಿ ಪದ್ಧತಿಯ ವಿರುದ್ಧವೂ ಹೋರಾಡುವುದು ಅವಶ್ಯ.

●

ಗ್ರೆನಡ: ಲ್ಯಾಟಿನ್ ಅಮೆರಿಕದ ಹೊಸ ಕೆಂಪುನಕ್ಷತ್ರ

—ದಾಮು

ಲ್ಯಾಟಿನ್ ಅಮೆರಿಕಾ ಖಂಡದಲ್ಲಿ ಒಂದು ಹೊಸ ಪುಟ್ಟ ಕೆಂಪು ನಕ್ಷತ್ರ ಉದಯವಾಗಿದೆ-ಗ್ರೆನಡ. ಜನಸಂಖ್ಯೆ ಸುಮಾರು 1,10,000 ಅಷ್ಟೆ. ಭೂಪಟದಲ್ಲಿ ಸಾಧಾರಣವಾಗಿ ಒಂದು ಚುಕ್ಕೆಯಷ್ಟೆ ಅದು ಇರುವುದು. ಅಮೇರಿಕನ್ ಐಕ್ಯ ರಾಜ್ಯಗಳ ಫ್ಲೋರಿಡಾ ಸಂಸ್ಥಾನದ ಪಕ್ಕದಲ್ಲಿ ಸ್ವಲ್ಪವೂ ಹೆದರದೆ ಇರುವ ಸೋಷಲಿಸ್ಟ್ ಕ್ಯೂಬ. ಸ್ವಲ್ಪ ದಕ್ಷಿಣದಲ್ಲಿ ಜಮೈಕವೆಂಬ ಕಾಮನ್‌ವೆಲ್ತ್ ರಾಷ್ಟ್ರ. ಪೂರ್ವದಲ್ಲಿ ಹೈಟಿ, ಡೊಮಿನಿಕ ಸೇರಿದ ಹಿಸ್ಪಾನಿಯೋಳ ದ್ವೀಪ. ಇನ್ನೂ ಸ್ವಲ್ಪ ಪೂರ್ವದಲ್ಲಿ ಪೋರ್ಟರಿಕಾ. ಅದಾದ ಮೇಲೆ ಬಿಲ್ಲಿನ ಹಾಗೆ ವಾಲಿದ ಸಣ್ಣ ಸಣ್ಣ ದ್ವೀಪಗಳು. ಉತ್ತರಕ್ಕೆ ಸೇಂಟ್ ಲೂಸಿಯಾ ಮತ್ತು ದಕ್ಷಿಣಕ್ಕೆ ಟ್ರಿನಿಡಾಡ್‌ನ ಮಧ್ಯೆ ಪುಟ್ಟ ಗ್ರೆನಡ. ದಕ್ಷಿಣ ಅಮೆರಿಕಾದ ವೆನಿಸೂಲಕ್ಕೆ ಎದುರಾಗಿ.

ಟ್ರಿನಿಡಾಡ್, ಜಮೈಕಾ, ಸೇಂಟ್ ಲೂಸಿಯಾದ ಜೊತೆಗೆ ವಿಂಡ್‌ವರ್ಡ್ ದ್ವೀಪಗಳೆಂದು ಕರೆಯಲ್ಪಡುವ ಈ ದ್ವೀಪಗಳ ಸಮೂಹ ಒಂದು ಕಾಲದಲ್ಲಿ ಬ್ರಿಟೀಷ್ ಸಾಮ್ರಾಜ್ಯಕ್ಕೆ ಸೇರಿತ್ತು. ಜಮೈಕ ಮತ್ತು ಟ್ರಿನಿಡಾಡ್ ಹಿಂದೆಯೇ ಸ್ವತಂತ್ರವಾದವು. 1974 ಫೆಬ್ರವರಿ 4ರಂದು ಗ್ರೆನಡ ಸ್ವತಂತ್ರವಾಯಿತು.

ಸ್ವಾತಂತ್ರ್ಯ ಹೊಂದಿದ ಗ್ರೆನಡಾದಲ್ಲಿ ನಾಗರೀಕ ಹಕ್ಕುಗಳನ್ನು ದಮನ ಮಾಡಿ ಬ್ರಿಟೀಷ್ ಸಾಮ್ರಾಜ್ಯಶಾಹಿಯ ಹಿತರಕ್ಷಕ ಸರ್ ಎರಿಕ್ ಗೈರಿಯಾ ಸರ್ವಾಧಿಕಾರಿಯಾಗಿ ವಿರಾಜಿಸುತ್ತಿದ್ದ. ಬ್ರಿಟೀಷ್ ಸಾಮ್ರಾಜ್ಯದ ಪೀಡೆನೆಗಿಂತ ಕಷ್ಟವಾಗಿತ್ತು ಗೈರಿಯಾನ ಫ್ಯಾಸಿಸ್ಟ್ ದಬ್ಬಾಳಿಕೆ. ಆದರೆ ಈ ಪುಟ್ಟ ರಾಜ್ಯದಲ್ಲಿ ನಡೆಯುವ ಶೋಷಣೆ, ದಬ್ಬಾಳಿಕೆಯನ್ನು ಗಮನಿಸಲು ಯಾರಿದ್ದಾರೆ. ಭೂಗೋಳ ಪಠ್ಯ ಪುಸ್ತಕಗಳು ಮತ್ತು ಅಟ್ಲಾಸ್‌ಗಳೂ ಸಹ ಅಲಕ್ಷಿಸುವ ಈ ರಾಜ್ಯವನ್ನು ಯಾರು ಸ್ಥಾಪಿಸುವರು. ಯಾವ ಪತ್ರಿಕೆಗಳವೆ ಇದರ ಬಗ್ಗೆ ಒಂದನೇ ಪುಟದಲ್ಲಿ ಬರೆಯುವುದಕ್ಕೆ?

ಹೀಗಿರುವಾಗಲೇ ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಈ ದ್ವೀಪದಲ್ಲಿ ಒಂದು ಸ್ಫೋಟನವುಂಟಾಯಿತು. ಒಂದು ರಾಜಕೀಯ ಸ್ಫೋಟನ. ವಾಮಪಂಥೀಯ ವಿಚಾರವಾದಿಯಾದ ಮೂವತ್ತೆರಡು ವರ್ಷದ ಒಬ್ಬ ವಕೀಲನ ನೇತೃತ್ವದಲ್ಲಿ ಕಾರ್ಮಿಕರು, ವಿದ್ಯಾರ್ಥಿ ಯುವಜನತೆಗಳು ಸೇರಿ ಸರ್ವಾಧಿಕಾರಿ ಸರ್ ಎರಿಕ್ ಗೈರಿಯನ್ನು ಓಡಿಸಿ-ಮೋರಿಸ್ ಬಿಷಪ್ ಪ್ರಧಾನಿಯಾದ.

ಇದುವರೆಗೂ ಯಾರೂ ಗಮನಿಸದೆ ಇದ್ದ ಗ್ರೆನಡ ಅನೇಕ ರಾಜ್ಯಗಳ ಗಮನ ಸೆಳೆಯಿತು. ಸಂಪಾದಕೀಯವನ್ನು ಬರೆಯುವವರು ವಿಶ್ವಕೋಶವನ್ನೂ, ಇಯರ್ ಪುಸ್ತಕಗಳನ್ನೂ ಹುಡುಕಲಾರಂಭಿಸಿದರು. ಸಿ. ಐ. ಎ. ನವರು ಗ್ರೆನಡಾಗೆ ವಿಮಾನ ಹತ್ತಲು ಟ್ರಾವಲ್ ಏಜೆನ್ಸಿಯ ಮುಂದೆ ಕ್ಯೂ ನಿಂತರು.

ಸ್ವಾಭಾವಿಕವಾಗಿ ಗ್ರೆನಡ ಸೋಷಲಿಸ್ಟ್ ಕ್ಯೂಬದ ಜೊತೆ ಮೈತ್ರಿಯನ್ನು ಬೆಳೆಸಿತು ಮುಂದೆ ಸೋಷಲಿಸ್ಟ್ ರಾಷ್ಟ್ರಗಳ ಸರಣಿಗೆ ಸೇರಿ ತಾಟಸ್ಥ್ಯ ರಾಜ್ಯಗಳ ಮುಂಚೂಣಿಯಲ್ಲಿ ಮೋರಿಸ್ ಬಿಷಪ್ ಪ್ರಶಸ್ತನಾದ.

ಪ್ರಪ್ರಥಮವಾಗಿ ಅಮೆರಿಕನ್ 'ಕೊಕೊ ಕೋಲಾ' ವೆಂಬ ಬಹುರಾಷ್ಟ್ರ ಗುತ್ತೇದಾರಿ ಸಂಸ್ಥೆಯನ್ನು ರಾಷ್ಟ್ರೀಕರಣ ಮಾಡಿ ಮೋರಿಸ್ ಬಿಷಪ್ಪನ ವರ್ಗಸ್ವಭಾವವನ್ನು ಪ್ರಪಂಚಕ್ಕೆ ತೋರಿಸಿಕೊಟ್ಟ. ಮುಂದೆ ದೊಡ್ಡ ವಿದೇಶಿ ಹೋಟೇಲುಗಳನ್ನೂ, ವಿದೇಶಿ ವ್ಯಾಪಾರಿ ಸಂಸ್ಥೆಗಳನ್ನೂ ರಾಷ್ಟ್ರೀಕರಣ ಮಾಡಲು ಗ್ರೆನಡ ಕಣ್ಣಿಟ್ಟಿದೆ. ಈ 13 ತಿಂಗಳಲ್ಲಿ ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ಬಿಷಪ್ ಮಂತ್ರಿ ಮಂಡಳಿ ಜಾರಿಗೊಳಿಸಿತು.

ಕಮ್ಯುನಿಸ್ಟರೂ ಮತ್ತಿತರ ವಾಮಪಂಥದವರೂ, ರ್ಯಾಡಿಕಲ್ ಪ್ರಗತಿಪರವಾದಿಗಳನ್ನೊಳಗೊಂಡ ಒಂದು ರಂಗ ಹಾಗೂ 2000 ಸ್ವಯಂಸೇವಕರನ್ನೊಳಗೊಂಡ ಒಂದು ಸುಸಜ್ಜಿತ ಜನತಾ ಸೇನೆಗಳೇ ಬಿಷಪ್ ಸರ್ಕಾರದ ಅಡಿಗಲ್ಲುಗಳು.

ಅತಿ ಶೀಘ್ರದಲ್ಲೇ ಸ್ವತಂತ್ರವಾಗುವ ಆಂಟಿಗ್ವ. ಕಿಟಿನ್ ನೇವಿಸ್ ಮುಂತಾದ ರಾಜ್ಯಗಳಲ್ಲಿನ ಪಟ್ಟಭದ್ರ ಹಿತಾಸಕ್ತಿಗಳಿಗೆ ಈಗಾಗಲೇ ನಡುಕವಾರಂಭಿಸಿದೆ. ಈ ಪ್ರದೇಶದ ಅನೇಕ ದ್ವೀಪಗಳಿಗೆ ಅಮೇರಿಕ 1975ರಲ್ಲಿ 320 ಲಕ್ಷ ಡಾಲರ್‌ಗಳ ಸಹಾಯಧನ ಮಾಡಿದ್ದು ಈಗ ಅದು 1,150 ದಶಲಕ್ಷ ಡಾಲರ್‌ಗಳಾಗಿ ಹೆಚ್ಚಿದೆ. ಅಮೆರಿಕ ಹೀಗೆ ಹಣ ಕೊಟ್ಟು ಕೈಕಟ್ಟಿ ನಿಂತರೆ ಸಾಲದು ನಮಗೆ ಅನುಕೂಲವಾದ ವಾತಾವರಣವನ್ನು ಸೃಷ್ಟಿಸಬೇಕೆಂದು ಒಬ್ಬ ಬ್ರಿಟೀಷ್ ಬ್ಯಾಂಕರ್ ಮೊರೆಯಿಡುವುದಾಗಿ ನ್ಯೂಸ್‌ವೀಕ್ ವರದಿಮಾಡಿದೆ. ಅಮೇರಿಕ ಅದಕ್ಕೆ ಸಮಯ ಕಾಯುತ್ತಿದೆ.

ಸ್ಥಳೀಯ ಆಡಳಿತ ಕ್ಷೇತ್ರದಲ್ಲೂ ವಿದೇಶಿ ಧೋರಣೆಯಲ್ಲೂ ಎಡಪಂಥೀಯ ಪ್ರಜಾಪ್ರಭುತ್ವ ಹಾದಿಯಿಂದ ಕಿಂಚಿತ್ತೂ ಹಿಮ್ಮೆಟ್ಟುವುದಿಲ್ಲವೆಂದು ಪ್ರಧಾನಿ ಮೋರಿಸ್ ಬಿಷಪ್ ವ್ಯಕ್ತಪಡಿಸಿದ್ದಾರೆ. ಅಪ್ಘನ್ ಸಮಸ್ಯೆಯಿಂದ ಹಿಡಿದು ಪ್ಯಾಲಸ್ತೀನ್ ವರೆಗಿನ ವಿದೇಶಿ ಧೋರಣೆಗಳಲ್ಲಿ ದಟ್ಟವಾದ ಸಾಮ್ರಾಜ್ಯಶಾಹಿ ವಿರೋಧಿ ನಿಲುವೆಯನ್ನೇ ಗ್ರೆನಡ ತಾಳಿದೆ. ಅಪ್ಘನ್ ಸಮಸ್ಯೆ ಬಗ್ಗೆ ನ್ಯೂಸ್‌ವೀಕ್‌ಗೆ ಕೊಟ್ಟ ಭೇಟಿಯಲ್ಲಿ (ಮಾರ್ಚ್ 31) ಬಿಷಪ್ ಹೀಗೆ ತಿಳಿಸಿದರು. "ಅಪ್ಘನ್ ಕ್ರಾಂತಿಕಾರಿ ಚಟುವಟಿಕೆಗಳನ್ನು ದಮನಮಾಡಲು ಹೊರರಾಷ್ಟ್ರಗಳು ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ. ಸೋವಿಯೆಟ್ ರಷ್ಯಾವನ್ನು ಟೀಕಿಸುವ ವಿಶ್ವಸಂಸ್ಥೆಯ ತರಾವಿಗೆದುರಾಗಿ ಮತನೀಡಿ ಅಫ್ಘನ್ ಕ್ರಾಂತಿಗೆ ತಮ್ಮ ಬೆಂಬಲ ಸೂಚಿಸಿದವು. ಈ ಸಮಸ್ಯೆಯನ್ನು ಎತ್ತಿಹಿಡಿದು ವಿಶ್ವದ ಅನೇಕ ಕಡೆಗಳಲ್ಲಿ ಆಯುಧಗಳನ್ನು ಸಾಗಿಸಿ ವಿಶ್ವಶಾಂತಿಗೆ ಭಂಗವನ್ನುಂಟುಮಾಡಲು ಅಮೇರಿಕ ಸಂಚು ಮಾಡುತ್ತಿದೆ".

ಚಿಲಿಯಲ್ಲಿ ಅಲೆಂಡೆ ಸರ್ಕಾರವನ್ನುರುಳಿಸಿದ ಹಾಗೆ ತಮ್ಮ ಸರ್ಕಾರವನ್ನೂ ಉರುಳಿಸಲು ಅಮೆರಿಕ ಸಂಚು ಮಾಡಬಹುದೆಂಬುದನ್ನು ಮನದಲ್ಲಿಟ್ಟುಕೊಂಡೇ ತಮ್ಮ ಸರ್ಕಾರ ಮುಂದುವರಿಯುತ್ತಿದೆಯೆಂದು ಬಿಷಪ್ ತಿಳಿಸಿದರು.

ಗ್ರೆನಡದ ಜನತಾಕ್ರಾಂತಿಯ ಒಂದನೇ ವಾರ್ಷಿಕವನ್ನು ಬಹಳ ವಿಜೃಂಭಣೆಯಿಂದ ಗ್ರೆನಡದ ಜನತೆ ಆಚರಿಸಿತು. ಸಮಾಜವಾದಿ ರಾಷ್ಟ್ರಗಳು ಮತ್ತು ತಾಟಸ್ಥ್ಯ ರಾಜ್ಯಗಳೂ ಗ್ರೆನಡದ ಕ್ರಾಂತಿಗೆ ಬೆಂಬಲವನ್ನು ಸೂಚಿಸುವ ಸಲುವಾಗಿ ಗ್ರೆನಡಾಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಲಾಯಿತು. ಗ್ರೆನಡವನ್ನು ಒಂದು ಕ್ರಾಂತಿಕಾರಿ ರಾಜ್ಯವನ್ನಾಗಿ ವಿಶ್ವವು ಒಪ್ಪಿಕೊಂಡಿದೆಯೆಂಬುದನ್ನು ಅಮೆರಿಕ ಅರ್ಥಮಾಡಿಕೊಂಡಿದೆ.

(6ನೇ ಪುಟ ನೋಡಿ)

ರಾಜ್ಯದಾದ್ಯಂತ ಸಿ. ಐ. ಟಿ. ಯು.

ಅಖಿಲಭಾರತ ಬೇಡಿಕೆ ದಿನಾಚರಣೆ

ಸಿ. ಐ. ಟಿ ಯು. ಕೇಂದ್ರ ಸಮಿತಿ ಐದು ಅಂಶಗಳ ಬೇಡಿಕೆಗಾಗಿ ತಾ. 21-4-80 ರಂದು ಅಖಿಲ ಭಾರತ ಬೇಡಿಕೆ ದಿನಾಚರಣೆ ಆಚರಿಸಲು ನೀಡಿದ ಕರೆಯ ಮೇರೆಗೆ ಕರ್ನಾಟಕದ ವಿವಿಧ ಭಾಗಗಳಲ್ಲಿ ಸಭೆ, ಮೆರವಣಿಗೆ, ಸಾರ್ವಜನಿಕ ಸಭೆಗಳು ನಡೆದವು.

ಬೇಡಿಕೆಗಳು: 1. ದೇಶದಲ್ಲಿ ಮತ್ತೆ ಕಾಣಿಸಿಕೊಂಡಿರುವ ಸರ್ವಾಧಿಕಾರಿ ಪ್ರವೃತ್ತಿಯನ್ನು ತಡೆಗಟ್ಟುವುದು. 2, ಸಗಟು ವ್ಯಾಪಾರವನ್ನು ರಾಷ್ಟ್ರೀಕರಿಸುವುದು, ಸಮರ್ಪಕ ಸಾರ್ವಜನಿಕ ವಿತರಣಾ ವ್ಯವಸ್ಥೆ ಮತ್ತು ಕಾಳಸಂತೆಕೋರರ ವಿರುದ್ಧ ಉಗ್ರಕ್ರಮ, ರೈತರು ಬೆಳೆದ ಬೆಳೆಗಳಿಗೆ ಯೋಗ್ಯ ಬೆಲೆ ಸಿಗಬೇಕು. 3. ಉದ್ಯೋಗ ಇಲ್ಲವೇ ನಿರುದ್ಯೋಗ ಭತ್ಯ 4. ಭಾರತ ಉಪ-ಖಂಡದಲ್ಲಿ ಹೆಚ್ಚಾಗುತ್ತಿರುವ ಸಾಮ್ರಾಜ್ಯಶಾಹಿಗಳ ಪಿತೂರಿಯನ್ನು ಖಂಡಿಸುವುದು ಹಾಗೂ 5. ಕೇಂದ್ರ-ರಾಜ್ಯ ಸಂಬಂಧಗಳ ಪುನರ್ ವಿಮರ್ಶೆ,

ಬೆಂಗಳೂರು :

ನಗರದ ನಾನಾ ಭಾಗಗಳಿಂದ ಹೊರಟ ಸಿ.ಐ.ಟಿ.ಯು. ಕಾರ್ಯಕರ್ತರ ಬೃಹತ್ ಮೆರವಣಿಗೆ ಸಂಜೆ 6 ಗಂಟೆಗೆ ಚಿಕ್ಕಲಾಲ್‌ಬಾಗ್ ಸೇರಿತು. ಸಭೆಯನ್ನು ಉದ್ದೇಶಿಸಿ ಕಾಂ. ವಿ.ಜೆ.ಕೆ. ನಾಯರ್, ಕಾಂ. ಟಿ ಎಸ್. ಅನಂತರಾವ್, ಕಾಂ. ಆರ್. ಶ್ರೀನಿವಾಸ್, ಕಾಂ. ಎಂ. ಎಸ್. ಸಿ. ರಾವ್ ಮೊದಲಾದವರು ಮಾತನಾಡಿದರು. ಕಾಂ. ಸೂರ್ಯನಾರಾಯಣರಾವ್ ಅಧ್ಯಕ್ಷತೆ ವಹಿಸಿದ್ದರು. ಕಾಂ. ವಿ. ಪಿ. ಕುಲಕರ್ಣಿ ಎಲ್ಲರನ್ನೂ ಸ್ವಾಗತಿಸಿದರು. ಕಾಂ. ಜಿ. ರಾಮು ವಂದನಾರ್ಪಣೆ ಮಾಡಿದರು.

ಕಾತಗುಣಿ, ಐ. ಟಿ. ಸಿ. ಹಾಗೂ ಕೆನರಾ ಬ್ಯಾಂಕ್ ನೌಕರರ ಹೋರಾಟಗಳಿಗೆ ಬೆಂಬಲ ಸೂಚಿಸುವ ನಿರ್ಣಯ ಕೈಗೊಳ್ಳಲಾಯಿತು. ಮೇ ಒಂದನೇ ತಾರೀಕನ್ನು ಸಾರ್ವಜನಿಕ ರಜಾದಿನವೆಂದು ಘೋಷಿಸಲು ಸರಕಾರವನ್ನು ಒತ್ತಾಯಿಸಲಾಯಿತು.

ಹರಿಹರ :

ಹರಿಹರ ಕಿರ್ಲೋಸ್ಕರ್, ಬೀಡಿ, ಪಾಲಿಫೈಬರ್ಸ್, ಕನ್‌ಸ್ಟ್ರಕ್ಷನ್ ಯೂನಿಯನ್ ಮುಂತಾದ ಕಾರ್ಮಿಕ ಸಂಘಗಳ ಸಾವಿರಾರು ಕೆಲಸಗಾರರು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದ ನಂತರ ಕಾಂ. ಎನ್. ಎಲ್. ಉಪಾಧ್ಯಾಯ ಹಾಗೂ ಕಾಂ. ಧಾರೇಶ್ವರ್‌ರವರ ನೇತೃತ್ವದಲ್ಲಿ ಬೇಡಿಕೆಗಳನ್ನುಳ್ಳ ಮನವಿ ಪತ್ರವನ್ನು ತಹಸೀಲ್ದಾರರಿಗೆ ಕೊಡಲಾಯಿತು.

ಕಾಂ. ಎನ್.ಎಲ್. ಉಪಾಧ್ಯಾಯ, ಕಾಂ. ಧಾರೇಶ್ವರ್, ಡಿ. ಜಿ. ಜೋಷಿ, ಎನ್. ಜಿ. ಪಠಾಣ, ಮದಾರ್‌ಸಾಬ್ ಹಾಗೂ ಸೀತಾಪತಿಯವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಚಿಕ್ಕಬಳ್ಳಾಪುರ :

ಕಾರ್ಮಿಕರೇ ಅಧಿಕ ಸಂಖ್ಯೆಯಲ್ಲಿರುವ ದರಗಾಮೊಹಲ್ಲಾದಲ್ಲಿ ಸಿ. ಐ. ಟಿ. ಯು. ನೇತೃತ್ವದಲ್ಲಿ ಬಹಿರಂಗ ಸಭೆ ನಡೆಯಿತು. ಸ್ಥಳೀಯ ಸಿ. ಪಿ. ಐ. (ಎಂ) ಮುಖಂಡ ಕಾಂ. ಎಸ್. ಲಕ್ಷ್ಮಯ್ಯನವರು ಬೇಡಿಕೆಗಳನ್ನು ವಿವರಿಸಿದರು. ಕಾಂ. ಕಾಂತರಾಜು ಸ್ವಾಗತಿಸಿ, ಕೊನೆಯಲ್ಲಿ ವಂದಿಸಿದರು.

ಶಿಡ್ಲಘಟ್ಟ :

ಬ್ಯಾಂಡ್, ಹಲಗೆ ವಾದ್ಯಗಳೊಂದಿಗೆ ಕೆಂಪು ಬಾವುಟಗಳನ್ನು ಹಿಡಿದು ಕಾರ್ಮಿಕರು, ಮಹಿಳೆಯರು ಹಾಗೂ ಶಾಲಾ ಬಾಲಕ, ಬಾಲಕಿಯರನ್ನು ಒಳಗೊಂಡ ಮೆರವಣಿಗೆ ಕಾಂ. ಎಂ. ಎನ್. ವೆಂಕಟರಮಣಪ್ಪ, ಕಾಂ. ಆರ್. ಮುನಿಯಪ್ಪನವರ ನೇತೃತ್ವದಲ್ಲಿ ನಡೆಯಿತು. ಕಾಂ. ಜಿ. ದೊರೆಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಕಾಂ. ಲಕ್ಷ್ಮಣರೆಡ್ಡಿ, ಕೆ.ಎಂ. ವೆಂಕಟೇಶ್, ಕೆ. ಕಾಶೀನಾಥ್ ಶಾಸ್ತ್ರಿ ಮತ್ತು ಮಣಿಯವರು ಮಾತನಾಡಿದರು. ಕಾಂ. ಅನಂತಪದ್ಮನಾಭರಾವ್ ವಂದಿಸಿದರು,

ಕುಂದಾಪುರ :

ಕಾಂ. ಸಿ. ನಾರಾಯಣರವರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಸಭೆಗೆ, ಕಾಂ. ಸಿ. ನಂಜುಂಡಪ್ಪನವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಕಾಂ. ಅಬ್ರಹಂ ಕರ್ಕಡರವರು ಸಮಸ್ಯೆಗಳನ್ನು ವಿವರಿಸಿದರು. ದಾಸ್‌ಭಂಡಾರಿಯವರು ಸ್ವಾಗತಿಸಿದರು. ಸಾರ್ವಜನಿಕ ಸಭೆಗೆ ಮೊದಲು ಪೇಟೆಯಲ್ಲಿ ಬೃಹತ್ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು.

ದಾಂಡೇಲಿ :

ಅಖಿಲ ಭಾರತ ಬೇಡಿಕೆ ದಿನಾಚರಣೆಯನ್ನು ಉತ್ಸಾಹದಿಂದ ಆಚರಿಸಲಾಯಿತು. ಸಂಡೇ ಮೈದಾನದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಕಾಂ. ಆರ್. ಜಿ. ಸ್ಥಳೇಕರ್, ಜಿ. ವಿ ಪವಾರ್, ಟಿ ಟಿ. ನಾಯ್ಕ, ಎಂ. ಆರ್. ನಾಯ್ಕ. ಎಂ. ಜೆ. ಜನ್ನು ಮುಂತಾದವರು ಮಾತನಾಡಿ ಬೇಡಿಕೆಗಳನ್ನು ವಿವರಿಸಿದರು.

ಚಿಕ್ಕಮಂಗಳೂರು :

ಜಿಲ್ಲಾ ಸಹಕಾರಿ ಬ್ಯಾಂಕಿನ ಸಭಾಂಗಣದಲ್ಲಿ ಬೇಡಿಕೆ ದಿನಾಚರಣೆಯ ಅಂಗವಾಗಿ ಸಭೆ ನಡೆಯಿತು. ಅಧ್ಯಕ್ಷತೆಯನ್ನು ನ್ಯಾಯವಾದಿ ಕಾಂ. ಹಾಲಪ್ಪನವರು ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಕಾರ್ಮಿಕ ಮುಖಂಡರಾದ ಕಾಂ. ತೋಡಿನ್ನಾಯ, ಎ. ಸಿ. ಕೇಶವ ಹಾಗೂ ಎ. ಕೆ. ವಿಶ್ವನಾಥ್ ಮಾತನಾಡಿದರು. ಸ್ವಾತಂತ್ರ ಹೋರಾಟಗಾರರಾದ ಕಾಂ. ಎಂ. ವಿ. ಸುಬ್ಬಯ್ಯ, ಕಾಫಿ ಕ್ಯೂರಿಂಗ್ ನೌಕರರ ಸಂಘದ ಈಶ್ವರಪ್ಪ ಮತ್ತು ಜೋಸೆಫ್ ಸಹಾ ಹಾಜರಿದ್ದರು.

●

ಡಾ. ಅಂಬೇಡ್ಕರ್ ಜಯಂತಿ

ದ. ಕ. ಜಿಲ್ಲಾ ಪರಿಶಿಷ್ಟ ಸಮಾಜ ಮತ್ತು ದಲಿತ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ತಾ. 14-4-80ರಂದು ಮಂಗಳೂರಿನಲ್ಲಿ ಡಾ. ಅಂಬೇಡ್ಕರ್‌ರವರ 89ನೇ ಜನ್ಮ ಜಯಂತಿಯನ್ನು ಆಚರಿಸಲಾಯಿತು.

ನಾಲ್ಕು ಗಂಟೆಗೆ ಪ್ರಾರಂಭವಾದ ಮೆರವಣಿಗೆಯ ನೇತೃತ್ವವನ್ನು ಕಾಂ. ಬಿ. ರಾಮಕೃಷ್ಣ, ಸಿದ್ಧಲಿಂಗಯ್ಯ, ಜಿ. ಸೋಮಶೇಖರ್ ಮುಂತಾದವರು ವಹಿಸಿದ್ದರು.

ಕ್ರಾಂತಿಗೀತೆಗಳ ನಂತರ, ಮಂಗಳಗಂಗೋತ್ರಿಯ ಅರ್ಥಶಾಸ್ತ್ರದ ಪ್ರಾಧ್ಯಾಪಕರಾದ ಶ್ರೀ ಬಸವರಾಜ್‌ರವರ ಅಧ್ಯಕ್ಷತೆಯಲ್ಲಿ ಸಂಜೆ ಬಹಿರಂಗ ಸಭೆ ನಡೆಯಿತು. ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಬಂದಿದ್ದ ದಲಿತ ಕವಿ ಸಿದ್ಧಲಿಂಗಯ್ಯ, ಬಿ. ರಾಮಕೃಷ್ಣ ಹಾಗೂ ಉದ್ಘಾಟಕ ಸಂಜೀವ ಮುಂತಾದವರು ಮಾತನಾಡಿ ದಲಿತರನ್ನು ಕಾಡುತ್ತಿರುವ ವಿವಿಧ ಸಮಸ್ಯೆಗಳನ್ನು ಪ್ರಸ್ತಾಪಿಸಿ, ಸದ್ಯದ ವ್ಯವಸ್ಥೆ ಬದಲಾಗದೆ ದಲಿತರಿಗೆ ಉಳಿಗಾಲವಿಲ್ಲವೆಂದರು. ಜಿ. ಕೆ. ತಣ್ಣೀರು ಬಾವಿ ಠರಾವುಗಳನ್ನು ಓದಿದರು. ಕೇಶವ ಆದ್ಯಪಾಡಿಯವರು ವಂದನಾರ್ಪಣೆ ಮಾಡಿದರು.

○

ಮೈಸೂರು ಮೈನ್ಸ್ ವರ್ಕರ್ಸ್ ಯೂನಿಯನಿಗೆ ಮನ್ನಣೆ

ಸಿ ಐ ಟಿ ಯು ಗೆ ಅದ್ಭುತ ಜಯ

ಹನ್ನೆರಡು ಸಹಸ್ರ ಕಾರ್ಮಿಕರಿರುವ ಕೆ. ಜಿ. ಎಫ್. ನ ಭಾರತ ಚಿನ್ನದ ಗಣಿ ಕಂಪೆನಿಯಲ್ಲಿ ಯೂನಿಯನ್ನಿಗೆ ಮನ್ನಣೆ ಕೊಡುವುದಕ್ಕಾಗಿ ಗುಪ್ತ ಮತದಾನವು 25-4-80ರಂದು ನಡೆಯಿತು. ಒಟ್ಟು ಚಲಾಯಿಸಲ್ಪಟ್ಟ ಮತಗಳ ಸಂಖ್ಯೆ ಸುಮಾರು 10,000. ಇದರಲ್ಲಿ ಸಿ. ಐ. ಟಿ. ಯು. ವಿಗೆ ಸೇರಿದ ಮೈಸೂರು ಮೈನ್ಸ್ ವರ್ಕರ್ಸ್ ಯೂನಿಯನ್ನಿಗೆ 7138 ಮತಗಳೂ, ಸ್ಥಳೀಯ ಶಾಸಕ ಸಿ. ಎಮ್. ಆರ್ಮುಗನ್ ಅವರ ನೇತೃತ್ವದ ಭಾರತ ಗೋಲ್ಡ್ ಮೈನ್ಸ್ ವರ್ಕರ್ಸ್ ಯೂನಿಯನ್ನಿಗೆ 2802 ಮತಗಳೂ ದೊರೆತು, ಸುಮಾರು ಶೇಕಡಾ 71 ಮತಗಳನ್ನು ಪಡೆದ ಸಿ. ಐ. ಟಿ. ಯು. ಅದ್ಭುತ ವಿಜಯವನ್ನು ಸಾಧಿಸಿದೆ.

ಲ್ಯಾಟಿನ್ ಅಮೆರಿಕದ ಹೊಸ ಕೆಂಪು ನಕ್ಷತ್ರ

(5ನೇ ಪುಟದಿಂದ)

ನಿಕರಾಗುವೆಯಲ್ಲಿ ಯಶಸ್ವಿಗೊಂಡ ಕ್ರಾಂತಿ ದಿನೇದಿನೇ ಶಕ್ತಿ ಹೊಂದುತ್ತಿರುವ ಎಲ್‌ಸಾಲ್ವಡೋರ್ ಕ್ರಾಂತಿ, ಕೊಲಂಬಿಯಾ, ಪನಾಮ, ಬೊಲೀವಿಯಾ, ಗ್ವಾಟಿಮಾಲಾ ಮುಂತಾದ ಲ್ಯಾಟಿನ್ ಅಮೆರಿಕನ್ ರಾಜ್ಯಗಳಲ್ಲಿ ದಿನೇದಿನೇ ನಡೆಯುತ್ತಿರುವ ರಾಜಕೀಯ ಹೋರಾಟಗಳಿಂದ ವಾಷಿಂಗ್ಟನ್ ತುಂಬ ಅಸಮಾಧಾನಗೊಂಡಿದೆ. ಈ ಸನ್ನಿವೇಶದಲ್ಲಿ ಈ ಪುಟ್ಟ ರಾಜ್ಯದ ಸವಾಲೂ ಸಹ ಅಮೆರಿಕನ್ ಸಾಮ್ರಾಜ್ಯಶಾಹಿಗೆ ಒಂದು ಸಿಂಹಸ್ವಪ್ನವಾಗಿದೆ. ಗ್ರೆನಡ ಕ್ರಾಂತಿಯ ಕಿಡಿ ಕರೀಬಿಯನ್ ದ್ವೀಪ ಸಮೂಹದಲ್ಲಿ ಹರಡುವುದು ಖಂಡಿತ. ಅಟ್ಲಾಂಟಿಕ್ ಸಾಗರದಾಚೆಯಿರುವ ಆಫ್ರಿಕನ್ ಖಂಡದ ಅಂಗೋಲ ಮತ್ತು ಎಥಿಯೋಪಿಯಾ ರಾಜ್ಯಗಳ ಕ್ರಾಂತಿಕಾರಿ ಚಳುವಳಿಯ ಸಹಾಯಕ್ಕೆ ಓಡಿಬಂದ ಪೋಷಲಿಸ್ಟ್ ಕ್ಯೂಬ ಗ್ರೆನಡದ ರಕ್ಷಣಾಕವಚವಾಗಿದೆ.

●

ಕಾರ್ಮಿಕರ ಜಯ

ಬೆಂಗಳೂರು ಸಾಫ್ಟ್ ಡ್ರಿಂಕ್ಸ್ ಕಾರ್ಮಿಕರು ಮಾರ್ಚಿ 4ರಿಂದ ಅನಿರ್ದಿಷ್ಟ ಕಾಲ ಹೋರಾಟ ನಡೆಸುತ್ತಿದ್ದರು. ಏಪ್ರಿಲ್ 4ರಂದು ಮಾಲೀಕರೊಡನೆ ಒಪ್ಪಂದ ನಡೆದು ವೇತನವು ಕನಿಷ್ಟ 80ರೂ. ನಿಂದ 150ರೂ.ಗೆ ಹೆಚ್ಚಿದೆ. ವಜಾ ಆಗಿದ್ದ ಸಂಘದ ಐವರು ಪದಾಧಿಕಾರಿಗಳನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ. ಸಿ.ಐ.ಟಿ ಯು. ಈ ಹೋರಾಟಕ್ಕೆ ನೇತೃತ್ವವನ್ನಿತ್ತಿದ್ದಿತು. ○

ಸಿನಿಮಾ ಕಾರ್ಮಿಕರ ಸಮ್ಮೇಳನ

ತುಮಕೂರು ಜಿಲ್ಲೆಯ ಸಿನಿಮಾ ಕಾರ್ಮಿಕರ ಪ್ರಥಮ ಸಮ್ಮೇಳನ ತಾ. 13-4-80ರಂದು ತುಮಕೂರು ಪುರಭವನದಲ್ಲಿ ಮಾಜಿ ಶಾಸಕ ಶ್ರೀ ಬಿ. ಪಿ. ಗಂಗಾಧರ್‌ರವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಸಂಘದ ಅಧ್ಯಕ್ಷರಾದ ತೊ. ಗ. ಅಡವೀಶಪ್ಪನವರು ಸಂಘಟನೆಗೆ ಸಂಬಂಧಿಸಿದಂತೆ ವರದಿಯನ್ನು ಸಮ್ಮೇಳನದಲ್ಲಿ ಮಂಡಿಸಿದರು. ರಾಜ್ಯ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಶ್ರೀ ಬಿ. ಪಿ. ಚಂದ್ರೇಗೌಡ ಸಮ್ಮೇಳನವನ್ನು ಉದ್ಘಾಟಿಸಿದರು. ರಾಜ್ಯ ಬೀಡಿಕಾರ್ಮಿಕರ ಫೆಡರೇಶನ್ನಿನ ಉಪಾಧ್ಯಕ್ಷರಾದ ಕಾಂ. ಕೆ. ಆರ್. ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ದೌರ್ಜನ್ಯದ ಖಂಡನೆ

ಮಾಲೂರುತಾಲ್ಲೂಕು ಹುಣಸೇಕೋಟೆಯಲ್ಲಿ ಬಡ ಗೇಣಿದಾರ ಶೇಷಗಿರಿಯಪ್ಪ ಹಾಗೂ ಆತನ ಮಗಳು ಅನುಸೂಯಮ್ಮನ ಮೇಲೆ ಶ್ರೀಮಂತ ಜಮೀನುದಾರ ಕೃಷ್ಣೇಗೌಡನ ಸಂಗಡಿಗರು ನಡೆಸಿದ ದೌರ್ಜನ್ಯವನ್ನು ಸಿ. ಐ. ಟಿ. ಯು. ಪ್ರಧಾನ ಕಾರ್ಯದರ್ಶಿ ಸಿ ನಂಜುಂಡಪ್ಪನವರು ಖಂಡಿಸಿದರು. ಅವರು ತಾ. 14-4-80 ರಂದು ಕೋಲಾರ ಜಿಲ್ಲಾ, ಕೆ. ಜಿ. ಎಫ್.ನಲ್ಲಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ರಾಜ್ಯದಲ್ಲಿ ಸಿ. ಐ. ಟಿ. ಯು. ಬೆಳವಣಿಗೆ ಶೀಘ್ರಗತಿಯಲ್ಲಿ ಆಗುತ್ತಿರುವುದು ನಮ್ಮ ಸರಿಯಾದ ತಿಳುವಳಿಕೆ ಮತ್ತು ನೀತಿ ಅನುಸರಣೆಯನ್ನು ತೋರಿಸುತ್ತದೆ ಎಂದರು ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

●

ಮ್ಯಾಗ್ನೀಷಿಯಂ ಪ್ರೊಡೆಕ್ಟ್ಸ ಕಾರ್ಖಾನೆ ಕಾರ್ಮಿಕರ ಹೋರಾಟ

ಸುಮಾರು 120 ಕಾರ್ಮಿಕರು ಕೆಲಸಮಾಡುವ ಮ್ಯಾಗ್ನೀಷಿಯಂ ಪ್ರೊಡೆಕ್ಟ್ಸ ಕಾರ್ಖಾನೆಯಲ್ಲಿ 4-5 ವರ್ಷ ದುಡಿದಿದ್ದರೂ ನೂರಕ್ಕೂ ಹೆಚ್ಚು ಕಾರ್ಮಿಕರು ಇನ್ನೂ ದಿನ ಕೂಲಿಗಳಾಗಿಯೇ ಉಳಿದಿದ್ದಾರೆ. ಫೆಬ್ರವರಿಯಲ್ಲಿ ಕಾರ್ಮಿಕರು ತಮ್ಮ ಅಲ್ಪ ವೇತನ, ಹಂಗಾಮಿ ಕೆಲಸ ಮುಂತಾದ ಸಮಸ್ಯೆಗಳನ್ನು ಪ್ರಸ್ತಾಪಿಸಿ ಬೇಡಿಕೆಗಳನ್ನು ಮಂಡಿಸಿದರು. ಕೂಡಲೇ ಆಡಳಿತವರ್ಗ ಇಬ್ಬರು ಸಂಘದ ಪದಾಧಿಕಾರಿಗಳನ್ನು ಕೆಲಸದಿಂದ ವಜಾ ಮಾಡಿದ್ದಾರೆ. ಇದನ್ನು ಪ್ರತಿಭಟಿಸಿ ಬ್ರೈಕ್ ಮುಷ್ಕರ, ತಾ. 26-3-80 ರಂದು ಬೆಂಗಾಲ್ ಲ್ಯಾಂಪ್ಸ್ ಕಾರ್ಮಿಕರಿಂದ ಪ್ರದರ್ಶನ ನಡೆದಿದೆ, ತಾ. 27ರಿಂದ ಮಾಲೀಕರು ಲಾಕೌಟ್ ಘೋಷಿಸಿದ್ದಾರೆ. ಲಾಕೌಟನ್ನು ಖಂಡಿಸಿರುವ ಬೆಂಗಳೂರು ಈಸ್ಟ್ ಇಂಡಸ್ಟ್ರಿಯಲ್ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿ ಕಾಂ. ನಾರಾಯಣರಾವ್ ಭಾನುರವರು ಹೋರಾಟಕ್ಕೆ ಎಲ್ಲಾ ರೈತ, ಕಾರ್ಮಿಕರ ಬೆಂಬಲ ಕೋರಿದ್ದಾರೆ.

●

ಮೈಸೂರಿನಲ್ಲಿ ಸಿ. ಐ. ಟಿ. ಯು. ಅಖಿಲಭಾರತ ದಿನಾಚರಣೆ

ಸಿ. ಐ. ಟಿ. ಯು. ವಿನ ಕೇಂದ್ರ ಸಮಿತಿಯ ಕರೆಯ ಮೇರೆಗೆ ಮೈಸೂರಿನಲ್ಲಿ 21ನೇ ಏಪ್ರಿಲ್‌ನಂದು ಅಖಿಲ ಭಾರತ ದಿನ ಆಚರಿಸಲಾಯಿತು. ಬೀಡಿ ಕರಕುಶಲ ಕಾರ್ಮಿಕರು ಸಭೆ ನಡೆಸಿದರು. ಕಾಂ. ಎಂ. ಎಸ್. ಉಗ್ರಪ್ಪ, ಎಂ. ಶೇಖರ್, ಮೋಹನ್ ಕುಮಾರ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ●

ಎಸ್.ಎಫ್.ಐ. ಕಾರ್ಯಕರ್ತರ ಬಗ್ಗೆ ಪೋಲೀಸ್ ದರ್ಪ

ಕಳೆದ ಒಂಬತ್ತು ತಿಂಗಳಿಂದ ನ್ಯಾಯಬದ್ಧ ಬೇಡಿಕೆಗಳಿಗಾಗಿ ಹೋರಾಡುತ್ತಿರುವ ತಾತಗುಣಿ ಎಸ್ಟೇಟ್ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲು ಎಸ್. ಎಫ್. ಐ. ನಗರ ಶಾಖೆಯ ಕಾರ್ಯಕರ್ತರು ದೇವಿಕಾರಾಣಿ ರೋರಿಚ್‌ರ ಮನೆಯ ಮುಂದೆ ಶಾಂತ ರೀತಿಯಲ್ಲಿ ಧರಣಿ ಸತ್ಯಾಗ್ರಹ ಪ್ರಾರಂಭಿಸಿದಾಗ ಪೋಲೀಸರು ಪ್ರವೇಶಿಸಿ ವಿದ್ಯಾರ್ಥಿಗಳನ್ನು ಬಂಧಿಸಿ ಕಬ್ಬನ್ ಪಾರ್ಕ್ ಪೋಲೀಸ್ ಠಾಣೆಗೆ ಕರೆದೊಯ್ದರು. ಸಬ್‌ಇನ್ಸ್‌ಪೆಕ್ಟರ್ ಡಿ. ರವೀಂದ್ರ, ಅವರು ಕಾರ್ಯಕರ್ತರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಹೊಡೆಯಲು ಮುಂದಾದರು. ಈ ಅಕ್ರಮ ವರ್ತನೆಯನ್ನು ಎಸ್. ಎಫ್. ಐ. ರಾಜ್ಯ ಶಾಖೆಯು ಖಂಡಿಸಿ, ರವೀಂದ್ರರ ಮೇಲೆ ಸೂಕ್ತಕ್ರಮ ಕೈಗೊಳ್ಳಲು ಒತ್ತಾಯಿಸಿದೆ.

●

ಗೂಂಡಾಗಳ ಹಲ್ಲೆ

ಮೈಕೋ ಕಾರ್ಮಿಕರ ಸಂಘಟನೆಯನ್ನು ಒಡೆಯಲು ಪ್ರಯತ್ನಿಸಿ ನಿರಾಶರಾದ ಛಿದ್ರಕಾರಿ ಶಕ್ತಿಗಳು ಮತ್ತೆ ತಲೆಯೆತ್ತಲು ಪ್ರಯತ್ನಿಸುತ್ತಿವೆ. ಇದರಿಂದ ಕೆಲವು ತಿಂಗಳಿಂದ ಶಾಂತವಾಗಿದ್ದ ಪರಿಸ್ಥಿತಿ ಮತ್ತೆ ಹದಗೆಡುತ್ತಿದೆ. ತಾ. 5-5-80ರಂದು ಕಾರ್ಮಿಕರು ತಮ್ಮ ಕೆಲಸ ಮುಗಿಸಿ ಮನೆಗೆ ಹೋಗುವಾಗ ಕೆಲವು ಗೂಂಡಾಗಳು ವಿನಾಕಾರಣ ಕಾರ್ಮಿಕರ ಮೇಲೆ ಹಲ್ಲೆ ನಡೆಸಿದ್ದಾರೆ. ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳು ಇದುವರೆಗೂ ಸಮಾಜಘಾತುಕರನ್ನು ಹಿಡಿಯಲು ಸಾಧ್ಯವಾಗಿಲ್ಲ, ಬದಲಿಗೆ ಕಾರ್ಮಿಕರನ್ನೇ ಬಂಧಿಸಿದ್ದಾರೆ.

ಸರ್ಕಾರ ಮತ್ತು ಪೋಲೀಸ್ ಇಲಾಖೆಯ ಹೊಣೆಗೇಡಿತನವನ್ನು ಖಂಡಿಸಿರುವ ಮೈಕೋ ಕಾರ್ಮಿಕರ ಸಂಘದ ಅಧ್ಯಕ್ಷ ಕಾಂ ಸೂರ್ಯನಾರಾಯಣರಾವ್ ರವರು ಕಾರ್ಮಿಕರಿಗೆ ಈ ಕೂಡಲೇ ರಕ್ಷಣೆ ದೊರೆಯಬೇಕೆಂದು ಒತ್ತಾಯಪಡಿಸಿದ್ದಾರೆ. ●

ನೌಕರರ ಜಯ

ಹರ್ಬರ್ಟ್ (ಇಂಡಿಯಾ) ಕಾರ್ಖಾನೆ ಆಡಳಿತವರ್ಗ ಮತ್ತು ಸಿ. ಐ. ಟಿ. ಯು. ನೇತೃತ್ವದ ನೌಕರರ ಸಂಘದ ಮಧ್ಯೆ ತಾ. 24-4-80 ರಂದು ಒಂದು ಒಪ್ಪಂದವಾಯಿತು. ಒಪ್ಪಂದದ ಪ್ರಕಾರ ಕಾರ್ಮಿಕರ ಮೂಲ ವೇತನದಲ್ಲಿ ಹೆಚ್ಚಳ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಧನಸಹಾಯ, ಎಲ್. ಟಿ. ಸಿ. ಸೌಲಭ್ಯ, ವಾಹನ ವ್ಯವಸ್ಥೆ, ಮನೆಬಾಡಿಗೆ ಭತ್ಯ, ವಾರ್ಷಿಕ ಬಡ್ತಿಯ ದರಗಳ ಏರಿಕೆ ಇವೆಲ್ಲದರ ಪರಿಣಾಮವಾಗಿ ಸರಾಸರಿ ಒಬ್ಬ ಕಾರ್ಮಿಕನಿಗೆ ತಿಂಗಳಿಗೆ ರೂ. 180 ಹೆಚ್ಚಳ ಹಣ ಸಿಗುತ್ತದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಸಿ. ಕುಂಜಪ್ಪನ್ ತಿಳಿಸಿದ್ದಾರೆ. ಕಾರ್ಮಿಕರ ಪರವಾಗಿ ಸಂಘದ ಅಧ್ಯಕ್ಷರಾದ ಕಾಂ. ಸೂರ್ಯನಾರಾಯಣರಾವ್ ಒಪ್ಪಂದಕ್ಕೆ ಸಹಿ ಮಾಡಿದರು.

●

ಮಹಿಳೆಯರ ಶೋಷಣೆಯನ್ನು ನಿಲ್ಲಿಸಲು ಕರೆ

ಇತ್ತೀಚೆಗೆ ಸಭೆ ಸೇರಿದ್ದ ರಾಯಚೂರಿನ, ಪ್ರಗತಿಪರ ಮಹಿಳಾ ಸಂಘಟನೆ ಪತ್ರಿಕಾ ಹೇಳಿಕೆಯೊಂದನ್ನು ನೀಡಿದ್ದು ಅದರಲ್ಲಿ ರಾಷ್ಟ್ರದಲ್ಲಿ ಹಾಗೂ ರಾಜ್ಯದಲ್ಲಿ ಮಹಿಳೆಯರ ಮೇಲೆ ಆಗುತ್ತಿರುವ ವಿವಿಧ ರೀತಿಯ ಶೋಷಣೆಗಳನ್ನು ಕೊನೆಗಾಣಿಸಲು ವಿವಿಧ ಮಹಿಳಾ ಸಂಘಟನೆಗಳು ಒಂದಾಗಿ ದೌರ್ಜನ್ಯಗಳ ವಿರುದ್ಧ ಹೋರಾಡಬೇಕೆಂದು ಕರೆ ನೀಡಿದೆ. ಅಲ್ಲದೆ ಸಮಾಜವಾದಿ ಸಮಾಜ ನಿರ್ಮಾಣಕ್ಕಾಗಿ ಉಳಿದ ಪ್ರಜಾಸತ್ತಾತ್ಮಕ ಶಕ್ತಿಗಳೊಂದಿಗೆ ಸೇರಿ ಸಹಕರಿಸಬೇಕೆಂದು ಸಹಾ ಮನವಿ ಮಾಡಲಾಗಿದೆ. ಹೇಳಿಕೆಯಲ್ಲಿ ದೆಹಲಿ, ಮಥುರಾ, ಧಾರವಾಡ ಮುಂತಾದ ಕಡೆ ಮಹಿಳೆಯರ ಮೇಲೆ ಆಗುತ್ತಿರುವ ಅನ್ಯಾಯವನ್ನು ಪ್ರಸ್ತಾಪಿಸಿ ಖಂಡಿಸಲಾಗಿದೆ.

●

ಕೊಡಗಿನಲ್ಲಿ ಪೋಲೀಸ್ ದೌರ್ಜನ್ಯ

ಕೊಡಗು ಜಿಲ್ಲೆಯಲ್ಲಿ ಹೋಟೆಲು ಮಾಲೀಕರ ನಿಲುವನ್ನು, ಹೋಟೆಲು ತಿಂಡಿ ಬೆಲೆಗಳ ಏರಿಕೆಯನ್ನು ಪ್ರತಿಭಟಿಸಲು ಒಂದುಗೂಡಿದ್ದ ನೂರಾರು ಚಳುವಳಿಕಾರರ ಮೇಲೆ ಪೋಲೀಸರು ಅಮಾನುಷ ಕ್ರೌರ್ಯದಿಂದ ವರ್ತಿಸಿದ್ದಾರೆ. ಜನವರಿಯಿಂದ ಹಂತಹಂತವಾಗಿ ಏರಿದ ಬೆಲೆಯನ್ನು ಮಾಲೀಕರು ಇಳಿಸದೆ, ಪೋಲೀಸ್ ಯಂತ್ರವನ್ನು ಬಳಸಿ ಹೋರಾಟವನ್ನು ಮುರಿಯಲೆತ್ನಿಸುತ್ತಿದ್ದಾರೆ. ಹೋಟೆಲುಗಳ ಮುಂದೆ ಪಿಕೆಟಿಂಗ್ ನಡೆಸುತ್ತಿರುವ ಬೆಲೆ ವಿರೋಧಿ ಕ್ರಿಯಾ ಸಮಿತಿಯಲ್ಲಿ ಸ್ಥಳೀಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಾಖೆ ಸಕ್ರಿಯವಾಗಿ ಭಾಗವಹಿಸಿದೆ. ಈ ಸಮಿತಿಗೆ ಪೋಲೀಸ್ ಪೆಟ್ಟುತಿಂದು ಆಸ್ಪತ್ರೆಯಲ್ಲಿರುವ ಸ್ಟಾನ್‌ಲಿವಾಸ್ ಸಂಚಾಲಕರಾಗಿದ್ದಾರೆ.

○

ಬೀಡಿ ಮಜೂರರ ಬೃಹತ್ ಮತ ಪ್ರದರ್ಶನ

ದ.ಕ. ಜಿಲ್ಲೆ ಬಂಟ್ವಾಳ ತಾಲ್ಲೂಕು ಬೀಡಿ ಕೆಲಸಗಾರರು ತಾ. 25-4-80 ರಂದು, ಬೀಡಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಸರಕಾರ ತಳೆದಿರುವ ಅಲಕ್ಷದ ಧೋರಣೆಯ ವಿರುದ್ಧ ಪ್ರತಿಭಟನಾ ಮೆರವಣಿಗೆ ನಡೆಸಿದರು. ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದ ಕಾರ್ಮಿಕರು ತಾಲ್ಲೂಕು ಕಛೇರಿಗೆ ಹೋಗಿ ತಹಸೀಲ್ದಾರ್‌ರವರ ಮೂಲಕ ರಾಜ್ಯದ ಕಾರ್ಮಿಕ ಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ನಂತರ ಬಿ. ಸಿ. ರೋಡಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಸಂಘದ ಕಾರ್ಯದರ್ಶಿ ಕಾಂ ಬಿ ನಾರಾಯಣ ಅಧ್ಯಕ್ಷ ಬಿ ಹೆಚ್. ಬಂಗೇರ, ಕಾಂ. ಬಿ. ವಾಸುಗಟ್ಟಿ ಮತ್ತು ಮಂಜುನಾಥ ಸಾಫಲ್ಯರವರು ಮಾತನಾಡಿ ಬೀಡಿ ಕಾರ್ಮಿಕರು ಎಚ್ಚೆತ್ತು ಹೋರಾಟ ನಡೆಸಬೇಕೆಂದು ಕರೆ ನೀಡಿದರು.

●

ರಾಯರು ಬಾಯಿ ಬಿಟ್ಟರೆ...

ಅಧಿಕಾರಕ್ಕೆ ಬಂದ ಹೊಸತರಲ್ಲಿಯೇ ಗುಂಡೂರಾಯರು ಅನೇಕ ದಾಖಲೆಗಳನ್ನು ಸಂಪಾದಿಸಿಬಿಟ್ಟಿದ್ದಾರೆ ಇವುಗಳಲ್ಲೆಲ್ಲಾ ಬಹಳ ಮುಖ್ಯವಾದುದ್ದು ಎಂದರೆ : ಸಭೆಗೆ ತಕ್ಕಂತೆ ಹರಟುವುದು. ಕಾಂಗ್ರೆಸ್ಸಿಗರಿಗೆ ಈ ರೀತಿಯ ಸಮಯ ಸ್ಫೂರ್ತಿ ಸಾಮಾನ್ಯವಾದ ಗುಣವಾದರೂ, ಗುಂಡೂರಾಯರು ಮಾತ್ರ ಹಿಂದಿನ ಎಲ್ಲ ದಾಖಲೆಗಳನ್ನು ಇಕ್ಕಿ ಮೆಟ್ಟಿದ್ದಾರೆ.

ಎಂಥೆಂಥಾ ಭರವಸೆಗಳನ್ನು ಕೊಟ್ಟಿದ್ದಾರೆ ಗುಂಡೂರಾಯರು! ಬೆಳಗಾಂ ಸಾಹಿತ್ಯ ಸಮ್ಮೇಳನದಲ್ಲಿ ತಲೆ ಮೇಲೆ ಹೂವು ಬಿದ್ದ ಪುಳಕದಲ್ಲಿ 48 ಗಂಟೆಗಳೊಳಗೆ ಪರಿಷತ್ತಿಗೆ ಸೈಟು ಕೊಡಿಸುವೆ ಎಂದರು. ಇಂಥವು ಅನೇಕ. ಬರೀ ಗಂಟೆಗಳ ಲೆಕ್ಕದಲ್ಲೇ ಮಾತನಾಡುತ್ತಾರೆ ನಮ್ಮ ಮುಖ್ಯಮಂತ್ರಿಯವರು. ಆದರೆ ಗಂಟೆಗಳು ಹಾಗೇ ಹಾರಿಹೋಗುತ್ತವೆ ಖಾಲಿಯಾಗಿ.

ಇತ್ತೀಚೆಗೆ ಇಂಥದೇ ಒಂದು ಸಮಯ ಸ್ಫೂರ್ತಿಯ ಡೈಲಾಗು ಹೊಡೆದು ಕನ್ನಡ ಲೇಖಕರನ್ನು ರೊಚ್ಚಿಗೆಬ್ಬಿಸಿದ್ದಾರೆ. ಅದೇ ಕನ್ನಡ-ಸಂಸ್ಕೃತದ ವಿಚಾರದಲ್ಲಿ ಮುಖ್ಯಮಂತ್ರಿ ತಮ್ಮ ಬಾಣಬಿಟ್ಟಿರುವುದು ಈ ಸಾರಿ. ಪ್ರೌಢ ಶಿಕ್ಷಣದಲ್ಲಿ ಸಂಸ್ಕೃತವನ್ನು ಪ್ರಥಮ ಭಾಷೆ ಸ್ಥಾನದಿಂದ ಮೂರನೇ ಭಾಷೆ ಸ್ಥಾನಕ್ಕೆ ಇಳಿಸಿ ಅರಸು ಸರಕಾರ ಹೊರಡಿಸಿದ ಆಜ್ಞೆಯನ್ನು ವಾಪಸು ತೆಗೆದುಕೊಳ್ಳುತ್ತೇನೆ ಎಂದು ಅಲ್ಲಿ ಕೂಗಿಬಿಟ್ಟರು. ಸುತ್ತಲಿರುವ ಮಠಾಧಿಪತಿಗಳು ಉಘೇ ಎಂದರು.

ಪಾಪ ಗುಂಡೂರಾಯರಿಗೆ ಇಂಥ ವಿಚಾರಗಳು ಗೊತ್ತಾಗುವುದಿಲ್ಲ. ಈ ಆಜ್ಞೆಯನ್ನು ಅರಸು ಸರ್ಕಾರ ಹೊರಡಿಸಿದ್ದು ಉನ್ನತ ಸಮಿತಿಯೊಂದರ ಸಿಫಾರಸಿನ ಮೇಲೆ ಎಂಬುದೂ ಅವರಿಗೆ ಗೊತ್ತಿರುವ ಹಾಗೆ ಕಾಣುವುದಿಲ್ಲ. ಅರಸು ಸರ್ಕಾರ ಏತಿ ಎಂದಿದ್ದರೆ ಪ್ರೇತಿ ಎನ್ನಬೇಕಾದದ್ದು ಇವರ ಧರ್ಮತಾನೆ. ಇಂದಿರಾ ಕೃಪಾ ಪೋಷಿತ ಮಂಡಲಿ ನಾಟಕ ನಡೆಯುವುದು ಹೀಗೆಯೇ?

ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಅಧ್ಯಯನಕ್ಕೆ ಸಂಸ್ಕೃತದಿಂದ ನಿಧಾನಕ್ಕೆ ಕುತ್ತು ಬೀಳುತ್ತಿರುವುದು ಸ್ಪಷ್ಟವಾಗಿದೆ. ಸಮಾಜದ ಪ್ರತಿಷ್ಠಿತ ವರ್ಗಗಳ ಮಂದಿ ತಮ್ಮ ಮಕ್ಕಳಿಗೆ ಸಂಸ್ಕೃತ ಕೊಡಿಸುವುದರ ಮೂಲಕ ರ್‍ಯಾಂಕುಗಳನ್ನು ಗಿಟ್ಟಿಸಿಕೊಳ್ಳುತ್ತಿದ್ದಾರೆ. ಅದರಲ್ಲಿಯೂ ಬೆಂಗಳೂರು ನಗರದ ಪ್ರತಿಷ್ಠಿತ ಕಾಲೇಜುಗಳಲ್ಲಂತೂ ಸಂಸ್ಕೃತ ದಿನೇದಿನೇ ಬೆಳೆಯುತ್ತಾ ಕನ್ನಡವನ್ನು ಹತ್ತಿಕ್ಕುತ್ತಿದೆ. ಸಂಸ್ಕೃತದ ಮೇಲೆ ನಿಜವಾದ ಪ್ರೀತಿಯಿಂದ ಈ ಜನ ಸಂಸ್ಕೃತವನ್ನು ತೆಗೆದುಕೊಂಡರೆ ಭೇಷ್ ಎನ್ನಬಹುದು. ಆದರೆ, ವಾಸ್ತವ ಸಂಗತಿ ಹಾಗಲ್ಲ. ಜೊತೆಗೆ, ಸಂಸ್ಕೃತದ ಸಿಲಬಸ್ ಅಂತೂ ತೀರ ತೇಲವಾದದ್ದು ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ.

ಜೊತೆಗೆ ಈಗಿನ ಪರಿಸ್ಥಿತಿಯಲ್ಲಿ ಸಂಸ್ಕೃತದ ಪ್ರಚಾರ ಮತ್ತು ಪ್ರತಿಗಾಮಿ ಮೌಲ್ಯಗಳ ನಡುವೆ ನಿಕಟ ಸಂಬಂಧವಿದೆ. ಸಂಸ್ಕೃತದ ಪ್ರಚಾರದ ಹೆಸರಿನಲ್ಲಿ ಜಾತಿ-ಮತೀಯ ಶಕ್ತಿಗಳು ಬೆಳೆಯುತ್ತಿವೆ. ಆದ್ದರಿಂದ, ಈ ಹೊತ್ತಿನಲ್ಲಿ ಕನ್ನಡದ ಪರವಾಗಿ ಹೋರಾಟಮಾಡುವುದು ಪ್ರಜಾಪ್ರಭುತ್ವವಾದೀ ಹೋರಾಟದ ಮುಖ್ಯ ಅಂಗ.

ಈ ದೃಷ್ಟಿಯಿಂದಲೇ ಬಹುಪಾಲು ಕನ್ನಡ ಲೇಖಕರು ವಿಚಾರವಂತರು ಗುಂಡೂರಾಯರ ಮಾತಿಗೆ ಸಿಟ್ಟಿಗೆದ್ದಿದ್ದಾರೆ. ಅತ್ಯಂತ ಬೇಜವಾಬ್ದಾರೀ ನಿಲುವುಗಳ ಈ ಮುಖ್ಯಮಂತ್ರಿಗೆ ಕನ್ನಡದ ಜನ ಹಲವಾರು ಪಾಠಗಳನ್ನು ಕಲಿಸಬೇಕಾಗಿದೆ. ○

—ನಾರಾ

ವಾರ್ಷಿಕೋತ್ಸವ

ದ. ಕ. ಜಿಲ್ಲೆಯ ಉಳ್ಳಾಲ ತೊಕ್ಕೊಟ್ಟಿನ ನೇತಾಜಿ ಗೇಮ್ಸ್ ಕ್ಲಬ್‌ನ ಹನ್ನೊಂದನೇ ವಾರ್ಷಿಕೋತ್ಸವವು ಲಯನ್ ಆರ್. ಕೆ. ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು. ಜನಾರ್ಧನ ನಾಯಕ್ (ಮಾಜಿ ತಾಲ್ಲೂಕು ಬೋರ್ಡ್ ಸದಸ್ಯ) ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪ್ರಾರಂಭದಲ್ಲಿ ಶ್ರೀ ಆನಂದ ಗಟ್ಟಿಯವರು ಸ್ವಾಗತಿಸಿದರು. ಶ್ರೀ ಪರಮೇಶ್ವರಶೆಟ್ಟಿ, (ಸೋಮೇಶ್ವರ ಪಂಚಾಯತ್ ಅಧ್ಯಕ್ಷ) ಇವರು ಬಹುಮಾನ ವಿತರಣೆಗೈಯ್ದರು. ಕೊನೆಗೆ ಶ್ರೀ ಯು. ಬಿ. ನಾರಾಯಣ ಧನ್ಯವಾದವನ್ನರ್ಪಿಸಿದರು. ಕಾರ್ಯಕ್ರಮದ ಅಂಗವಾಗಿ ಶ್ರೀ ಕೆ. ವಿ. ಕುಮಾರ್‌ರವರ 'ಎನ್ನಮೈಸಿದಿ' ಎಂಬ ತುಳು ಸಾಮಾಜಿಕ ನಾಟಕ ಕ್ಲಬ್ಬಿನ ಸದಸ್ಯರಿಂದ ಅಭಿನಯಿಸಲ್ಪಟ್ಟಿತು.

○

ಪೌರಸಭೆ ಕಾರ್ಮಿಕರ ಬೇಡಿಕೆ

ಸರಕಾರಿ ನೌಕರರಿಗೆ ತುಟ್ಟಿಭತ್ಯ ಕೊಡುವುದನ್ನು ಫೆಬ್ರುವರಿ ಮತ್ತು ಜುಲೈ 79ರಿಂದ ಮಂಜೂರು ಮಾಡಲಾಗಿದೆ ಆದರೆ ಸ್ಥಳೀಯ ಅಂಗಗಳ ನೌಕರರಿಗೆ 80ರ ಏಪ್ರಿಲ್‌ನಿಂದ ಕೊಡುವಂತೆ ಆಜ್ಞೆ ಮಾಡಲಾಗಿದೆ. ಈ ಭೇದವನ್ನು ಖಂಡಿಸಿ, ಈ ಅನ್ಯಾಯವನ್ನು ಸರಿಪಡಿಸುವಂತೆ ಕರ್ನಾಟಕ ರಾಜ್ಯ ಸ್ಥಳೀಯ ಅಂಗಗಳ ನೌಕರರ ಮತ್ತು ಪೌರಕಾರ್ಮಿಕರ ಫೆಡರೇಷನ್ ಒತ್ತಾಯಪಡಿಸಿದೆ. ○

ಕಾರ್ಮಿಕರ ದಿನದಂದು ಕೆಂಬಾವುಟಗಳ ವಿಜೃಂಭಣೆ

(ಒಂದನೇ ಪುಟದಿಂದ)

ಸ್ಥಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡುತ್ತಿರುವುದನ್ನು ಅತ್ಯುಗ್ರವಾಗಿ ಖಂಡಿಸಿ ಮಾತನಾಡಿದ ಕಾಂ. ಸೂರಿ, ಅಮೆರಿಕಾವು ತನ್ನ ಯುದ್ಧ ನೀತಿಯನ್ನು ಬಿಡದಿದ್ದರೆ ಅವರ ಸರ್ಕಾರದ ವಿರುದ್ಧವೂ ಭಾರತದ ಕಾರ್ಮಿಕ ವರ್ಗ ಚಳುವಳಿ ಹೂಡಬೇಕಾದೀತು ಎಂದು ಎಚ್ಚರಿಕೆ ಕೊಟ್ಟರು.

ಬೆಂಗಳೂರು ಬಂದ್ ಬೆದರಿಕೆ:

ತಾತಗುಣಿ ಎಸ್ಟೇಟ್ ಹರಿಜನ ಕಾರ್ಮಿಕರ ಬಹು ದೀರ್ಘಕಾಲದ ಸಮಸ್ಯೆಗಳು, ಐ. ಟಿ. ಸಿ. ಕಾರ್ಮಿಕರ ನ್ಯಾಯಬದ್ಧವಾದ ಮುಷ್ಕರ, ಕೆನರಾ ಬ್ಯಾಂಕಿನ ನೌಕರರ ಸಸ್‌ಪೆನ್ಷನ್ ರದ್ದು ಮತ್ತು 'ಸಂಯುಕ್ತ ಕರ್ನಾಟಕ' ದೈನಿಕದ ಪುನರಾರಂಭಕ್ಕೆ ಸರ್ಕಾರ ಕ್ರಮ ಕೈಗೊಳ್ಳದಿದ್ದರೆ ಸಿ. ಐ. ಟಿ., ಯು. ಎಲ್ಲ ಕಾರ್ಮಿಕ ಸಂಘಗಳ ಸಹಕಾರದೊಂದಿಗೆ 'ಬೆಂಗಳೂರ್ ಬಂದ್'ಗೆ ವ್ಯವಸ್ಥೆ ಮಾಡಬೇಕಾದೀತು ಎಂದು ರಾಜ್ಯ ಸರ್ಕಾರಕ್ಕೆ ಕಾಂ. ಸೂರಿ ಎಚ್ಚರಿಕೆ ಕೊಟ್ಟರು.

ಸಿ. ಪಿ ಐ. ನೇತೃತ್ವದ ಎ. ಐ. ಟಿ. ಯು ಸಿ. ಕಾರ್ಮಿಕ ಸಂಘಟನೆಯವರು ಮೇ ದಿನವನ್ನು ಸಂಯುಕ್ತವಾಗಿ ಆಚರಿಸಲು ಸಹಕರಿಸದಿದ್ದುದಕ್ಕಾಗಿ ವಿಷಾದಿಸಿದ ಕಾಂ. ಸೂರಿ, ನಮ್ಮ ಜೊತೆಗೆ ಬನ್ನಿ–ಮುಂದಿನ ಮೇ ದಿನವನ್ನು ಕಂಠೀರವ ಕ್ರೀಡಾಂಗಣದಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸೋಣ ಎಂದು ಕರೆಕೊಟ್ಟರು.

ವೋಲ್ಟಾಸ್ ಕಾರ್ಮಿಕ ಸಂಘದ ನಾಯಕ ಸುಬ್ರಮಣ್ಯಂ, ಮೇ ದಿನ ಆಚರಣೆಯ ಮಹತ್ವವನ್ನು ವಿವರಿಸಿ ಮುಂದಿನ ವರ್ಷವಾದರೂ ಬೆಂಗಳೂರು ನಗರದ ಕಾರ್ಮಿಕರು ಒಗ್ಗಟ್ಟಾಗಿ ಮೇ ದಿನವನ್ನು ಆಚರಿಸಬೇಕೆಂಬ ಆಶಯ ವ್ಯಕ್ತಪಡಿಸಿದರು.

ಪ್ರಾರಂಭದಲ್ಲಿ ಕಾರ್ಮಿಕ ಸ್ತೋಮವನ್ನು ಸ್ವಾಗತಿಸಿ ಮಾತನಾಡಿದ ಬೆಂಗಳೂರು ಜಿಲ್ಲಾ ಸಿ. ಐ. ಟಿ. ಯು. ಕಾರ್ಯದರ್ಶಿ ಕಾಂ. ಟಿ. ಎಸ್. ಅನಂತರಾಮ್ ಮಾತನಾಡಿ ಮೇದಿನದ ಉದಯ ಮತ್ತು ಅದರ ಮಹತ್ವವನ್ನು ವಿವರಿಸಿದರು. ರೈತರ ಮತ್ತು ಕಾರ್ಮಿಕರ ಐಕ್ಯತೆಯನ್ನು ಸಾಧಿಸಿ ಸಮಾಜವಾದಿ ವ್ಯವಸ್ಥೆಯ ಸ್ಥಾಪನೆಗೆ ಬದ್ಧರಾಗಿರುವಂತ ಸರ್ಕಾರವನ್ನು ಕೇಂದ್ರದಲ್ಲಿ ತರಲು ಕಾರ್ಮಿಕರಿಗೆ ಮನವಿ ಮಾಡಿದರು.

'ಜಿಂದಾಬಾದ್–ಜಿಂದಾಬಾದ್ ಇನ್‌ಕಿಲಾಬ್ ಜಿಂದಾಬಾದ್' =ಮೇ ದಿನದ ಹಾಡಿನ ಅಂತಿಮ ಸಾಲುಗಳನ್ನು ದಲಿತ ಸಂಘರ್ಷ ಸಮಿತಿಯ ಉತ್ಸಾಹಿ ತರುಣರು ಹೇಳಿದಾಗ ಎಲ್ಲ ಕಾರ್ಮಿಕರು ತಮ್ಮ ದನಿಗೂಡಿಸಿ ತಮ್ಮ ಮುಷ್ಟಿಗಳನ್ನು ಮೇಲೆತ್ತಿದ ದೃಶ್ಯ ಸ್ಫೂರ್ತಿದಾಯಕವಾಗಿತ್ತು.

ಸಿ. ಐ. ಟಿ. ಯು. ಬೆಂಗಳೂರು ಜಿಲ್ಲಾ ಸಮಿತಿಯ ಸದಸ್ಯ ಕಾಂ. ಆರ್. ಶ್ರೀನಿವಾಸ್ ವಂದಿಸಿದರು.

ಕಾರ್ಮಿಕ ಬಾಂಧವರು ಹುಲಿವೇಷ, ಮುಂತಾದುವನ್ನು ಧರಿಸಿಕೊಂಡು ಬಂದು ಸಾಂಸ್ಕೃತಿಕ ಕಾರ್ಯಕ್ರಮವನ್ನೂ ಕೊಟ್ಟರು. ಯಶವಂತಪುರದ ಕಡೆಯ ಕಾರ್ಮಿಕ ಬಾಂಧವನೊಬ್ಬ ಕುದುರೆಯನ್ನೇರಿ ಮೇ ದಿನಕ್ಕೆ ಮೆರವಣಿಗೆಯಲ್ಲಿ ಬಂದಿದ್ದರೆ ಮತ್ತೆ ಹಲವು ಕಾರ್ಮಿಕರು ಆರ್ಕೆಸ್ಟ್ರಾ ಏರ್ಪಡಿಸಿ ನೃತ್ಯ ಮಾಡಿದರು.

ಇಳಕಲ್ :

ಬಿಜಾಪುರ ಜಿಲ್ಲೆಯ ನೇಕಾರ ಕೇಂದ್ರವಾದ ಇಳಕಲ್‌ನಲ್ಲಿ ಪವರ್ ಲೂಂ, ಹ್ಯಾಂಡ್‌ಲೂಂ, ಸಿನಿಮಾ ಮತ್ತಿತರ ಕೆಲಸಗಾರರು ಮೊದಲ ಬಾರಿಗೆ ಸೇರಿ ವಿಜೃಂಭಣೆಯಿಂದ ಮೇ ದಿನವನ್ನು ಆಚರಿಸಿದರು. ಬೆಳಿಗ್ಗೆ ಕಾರ್ಮಿಕ ಮುಖಂಡ ಕಾಂ. ಎನ್. ಕೆ. ಉಪಾಧ್ಯಾಯರಿಂದ ಕೆಂಪುಧ್ವಜಾರೋಹಣ ಆಯಿತು. ನಂತರ ಪ್ರಭಾತ ಫೇರಿ ನಡೆಯಿತು. ಸಾಯಂಕಾಲ ನಿವೃತ್ತ ಶಿಕ್ಷಕರಾದ ಶ್ರೀ ಬಿ. ಎ. ಬಿಜ್ಜಳ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಸಿ. ಐ. ಟಿ. ಯು. ಉಪಾಧ್ಯಕ್ಷರಾದ ಕಾಂ. ಎನ್. ಕೆ. ಉಪಾಧ್ಯಾಯ, ಬೇಗಾವಿಯ ನೇಕಾರರ ಮುಖಂಡ ಬಸವಣ್ಣಪ್ಪ ಅವರು ಭಾಷಣ ಮಾಡಿ, ಮೇ ದಿನದ ಮಹತ್ವ, ಕಾರ್ಮಿಕ ಹೋರಾಟದ ಅವಶ್ಯಕತೆಗಳನ್ನು ವಿವರಿಸಿದರು. ನಂತರ ಸಿ. ಸಿ. ಚಂದ್ರಾಪಟ್ಟಣ ಅವರು ಮಾತನಾಡಿದರು.

ಶಿರಸಿ :

ಶಿರಸಿಯಲ್ಲಿ ಕಳೆದ 24 ವರ್ಷಗಳಿಂದಲೂ ಮೇ ದಿನಾಚರಣೆ ನಡೆಯುತ್ತಿದೆ. ಈ ಬಾರಿ ಕರ್ನಾಟಕ ಪ್ರಾಂತ ರೈತಸಂಘದ ರಾಜ್ಯಸಮಿತಿ ಸದಸ್ಯರಾದ ಬಂಗಾರೇಶ್ವರ ಕೆರಿಯಾಗೌಡ ಅವರ ಅಧ್ಯಕ್ಷತೆಯಲ್ಲಿ ಮೇ ದಿನ ಆಚರಿಸಲಾಯಿತು. ಶ್ರೀ ವೈಶಾಲಿ, ಶ್ರೀಮತಿ ಗಾಯಿತ್ರಿ ಹೆಗಡೆ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು

ದಾಂಡೇಲಿ :

ಮೇ ದಿನಾಚರಣೆಗಾಗಿ ಸಲುವಾಗಿ ಸಿ. ಐ. ಟಿ. ಯು ವಿನ ದಾಂಡೇಲಿ ಘಟಕವು ಬೃಹತ್ ಸಭೆಯನ್ನು ಏರ್ಪಡಿಸಿತ್ತು. ಕಾರ್ಖಾನೆಗಳ ಕಾರ್ಮಿಕರು ಇದರಲ್ಲಿ ಬಹುಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಾಂ. ಎಂ. ಕೆ. ದೇಶಪಾಂಡೆ, ಜಿ. ವಿ. ಪವಾರ, ಎಂ. ಜೆ. ಜನ್ನು, ಟಿ. ಟಿ. ನಾಯ್ಕ ಇವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಕೊನೆಯಲ್ಲಿ ಕಾಂ. ಜಿ. ಆರ್. ನಾಯ್ಕ ವಂದನಾರ್ಪಣೆ ಮಾಡಿದರು.

ಚಿಕ್ಕಬಳ್ಳಾಪುರ :

ಇಲ್ಲಿನ ಕೃಷಿಕಾರ್ಮಿಕರು, ರೇಷ್ಮೆ ಕೆಲಸಗಾರರು ಭಾರಿ ಬಹಿರಂಗ ಸಭೆಯನ್ನು ಏರ್ಪಡಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಕಾರ್ಮಿಕ ನಾಯಕ ಕಾಂ. ಎಸ್. ಲಕ್ಷ್ಮಯ್ಯ ವಹಿಸಿದ್ದರು. ಪತ್ರಿಕೋದ್ಯಮಿ ಶ್ರೀ ಕೆ. ಎಂ. ಮುನಿಯಪ್ಪ ಅವರು, ಕಾರ್ಮಿಕರಿಗೆ ಒಂದಾಗಲು ಕರೆಕೊಟ್ಟರು. ಸಭೆಯಲ್ಲಿ ಸಿಹಿ ತಿಂಡಿ ಹಂಚಿಕೆ, ಕಾರ್ಮಿಕ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಕಾಂ. ಕಾಂತರಾಜು ವಂದಿಸಿದರು.

ದೊಡ್ಡಬಳ್ಳಾಪುರ :

ನೇಕಾರರು, ಮಿಲ್ಲಿನ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು ಸಿ. ಪಿ. ಐ (ಎಂ) ಮತ್ತು ಸಿ. ಪಿ ಐ. ಪಕ್ಷಗಳು ಸಂಯುಕ್ತವಾಗಿ ಏರ್ಪಡಿಸಿದ್ದ ಬಹಿರಂಗ ಸಭೆಯನ್ನು ಉದ್ದೇಶಿಸಿ ಕಾಂ. ಮುಗುವಾಳಪ್ಪ, ರಾಜ್ಯ ರೈತಸಂಘದ ಅಧ್ಯಕ್ಷರು, ಸ್ಥಳೀಯ ಸಿ ಪಿ ಐ (ಎಂ) ಮುಖಂಡ ಕಾಂ ರಾಮಭದ್ರಯ್ಯ ಹಾಗೂ ಎಸ್. ಎಫ್. ಐ. ಪ್ರಧಾನ ಕಾರ್ಯದರ್ಶಿ ಕಾಂ. ಎಸ್. ಆರ್ ಆರಾಧ್ಯ, ಮಾತನಾಡಿದರು. ಸಿ. ಪಿ. ಐ. ಪರವಾಗಿ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಾಂ ಎ. ಸಿ. ವೆಂಕಟರಾವ್ ಮಾತನಾಡಿದರು.

ಸಕಲೇಶಪುರ :

ಹಾಸನ ಜಿಲ್ಲಾ, ಸಕಲೇಶಪುರದಲ್ಲಿ ಮೇ ದಿನಾಚರಣೆಯಲ್ಲಿ ಭಾಗವಹಿಸಲು ಹತ್ತಾರು ಮೈಲಿ ನಡೆದು ಬಂದ ತೋಟ ಕಾರ್ಮಿಕರು, ಹಾಸನದ ಕಾಫಿ ಕ್ಯೂರಿಂಗ್ ಕಾರ್ಮಿಕರು ಉತ್ಸಾಹದಿಂದ ಭಾಗವಹಿಸಿದ್ದರು. ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿದ್ದ ಮೆರವಣಿಗೆ ನಗರದಲ್ಲಿ ಸುತ್ತಾಡಿ ಸಂತೆ ಮೈದಾನದಲ್ಲಿ ಕೊನೆಗೊಂಡಿದೆ.

ತೋಟ ಕಾರ್ಮಿಕರ ಸಂಘದ ಕಾರ್ಯದರ್ಶಿ ಕಾಂ. ವಿ. ಸುಕುಮಾರ್ ಎಲ್ಲರನ್ನೂ ಸ್ವಾಗತಿಸಿ, ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸಿ. ಐ. ಟಿ. ಯು. ರಾಜ್ಯ ಸಮಿತಿ ಸದಸ್ಯ ಕಾಂ. ಎ. ಸಿ. ಕೇಶವ, ಭಾರತ ವಿದ್ಯಾರ್ಥಿ ಫೆಡರೇಶನ್ ರಾಜ್ಯ ಶಾಖೆ ಅಧ್ಯಕ್ಷ ಕಾಂ. ಎಂ. ಇಕ್‌ಬಾಲ್ ಹುಸೇನ್ ಹಾಗೂ ಚಿಕ್ಕಮಂಗಳೂರಿನ ಕಾಂ. ತೋಡಿನಾಯರವರು ಮೇ ದಿನದ ಮಹತ್ವ, ಸದ್ಯದ ರಾಜಕೀಯ ಪರಿಸ್ಥಿತಿ ಮತ್ತು ಕಾರ್ಮಿಕ ವರ್ಗದ ಜವಾಬ್ದಾರಿಯನ್ನು ಕುರಿತು ಮಾತನಾಡಿದರು ಕಾರ್ಮಿಕ ಮುಖಂಡ ಕಾಂ. ವಿಶ್ವನಾಥ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸ್ವಾತಂತ್ರ್ಯ ಹೋರಾಟಗಾರ ಕಾಂ. ಎಂ. ವಿ. ಸುಬ್ಬಯ್ಯನವರು ವಿಶೇಷ ಆಸಕ್ತಿವಹಿಸಿ ಸಭೆಯಲ್ಲಿ ಭಾಗವಹಿಸಿದ್ದರು. ಘೋಷಣೆಗಳೊಂದಿಗೆ ಸಭೆ ಮುಗಿಯಿತು.

ತಿಪಟೂರು :

ತಾಲ್ಲೂಕು ರೈತಸಂಘ ಮತ್ತು ಸಿ. ಐ. ಟಿ. ಯು. ಸಂಯುಕ್ತವಾಗಿ ಮೇ ದಿನವನ್ನು ಆಚರಿಸಿದವು. ಸಮಾರಂಭದ ಅಧ್ಯಕ್ಷತೆಯನ್ನು ಕಾಂ. ಆರ್. ಎಸ್. ಚೆನ್ನಬಸವಣ್ಣ ವಹಿಸಿದ್ದರು. ಮೇ ದಿನದ ಮಹತ್ವವನ್ನು ಕುರಿತು ಕಾಂ. ದಯಾನಂದ ಮಾತನಾಡಿದರು. ಕಾಂ. ಕೋದಂಡರಾಮಯ್ಯರವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಅಮ್ಮಸಂದ್ರ :

ಅಮ್ಮಸಂದ್ರ ಸಿಮೆಂಟ್ ಕಾರ್ಖಾನೆ ಬಳಿ ಇರುವ ದಂಡಿನಶಿವರ ಗ್ರಾಮದಲ್ಲಿ ಮೇ ದಿನಾಚರಣೆಯನ್ನು ಆಚರಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಕಾರ್ಖಾನೆ ಅಧಿಕಾರಿ ಶ್ರೀ ಶಿವಾನಂದಮೂರ್ತಿಯವರು ವಹಿಸಿದ್ದರು ಸಿ. ಪಿ. ಐ. (ಎಂ.) ಮುಖಂಡ ಕಾಂ. ಬಿ. ಡಿ. ರಾಮಯ್ಯ ಹಾಗೂ ಕಾಂ. ಡಿ. ಬಿ. ರಾಜಣ್ಣನವರು ರೈತ, ಕಾರ್ಮಿಕರ ಐಕ್ಯತೆಯ ಬಗ್ಗೆ ಮತ್ತು ಮೇ ದಿನದ ಮಹತ್ವದ ಬಗ್ಗೆ ಮಾತನಾಡಿದರು. ಡಿ. ಎಸ್. ನಂಜುಂಡಯ್ಯನವರು ಸ್ವಾಗತಿಸಿದರು. ಡಿ. ಎಸ್. ಶಿವಣ್ಣ ವಂದನಾರ್ಪಣೆ ಮಾಡಿದರು.

ಹರಿಹರ :

ಚಿತ್ರದುರ್ಗ ಜಿಲ್ಲಾ, ಹರಿಹರದಲ್ಲಿ ಮೇ ದಿನಾಚರಣೆಯನ್ನು ಕಿರ್ಲೋಸ್ಕರ್. ಫಾಲಿಫೈಬರ್ಸ್, ಬೀಡಿ ಮುಂತಾದ ಕಾರ್ಮಿಕ ಸಂಘಗಳು ಸಂಯುಕ್ತವಾಗಿ ತಾ. 1-5-80ರಂದು ಆಚರಿಸಿದರು. ನಗರವನ್ನು ಕೆಂಪು ತೋರಣಗಳಿಂದ ಅಲಂಕರಿಸಿದ್ದರು. ಕಿರ್ಲೋಸ್ಕರ್ ಕಾರ್ಮಿಕರು "ಮೇ ದಿನ ಚಿರಾಯುವಾಗಲಿ" ಎಂಬ ಬ್ಯಾಡ್ಜನ್ನು ಧರಿಸಿದ್ದರು.

ಸಂಜೆ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಸಿ. ಐ. ಟಿ. ಯು. ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಮಾತನಾಡುತ್ತಾ ಮೇ ದಿನದ ಮಹತ್ವ, ಹೋರಾಟ, ದೇಶದ ರಾಜಕೀಯ ಪರಿಸ್ಥಿತಿ ರೈತ-ಕಾರ್ಮಿಕ ಚಳುವಳಿ, ಎಡರಂಗ ಸರಕಾರಗಳ ಕಾರ್ಯಕ್ರಮ ಮುಂತಾದುವನ್ನು ಅಂಕಿ-ಅಂಶಗಳ ಸಹಿತ ವಿವರಿಸಿದರು. ಕಾಂ. ಎಲ್. ಸೀತಾಪತಿಯವರು ಸ್ವಾಗತಿಸಿದರು. ಕಾಂ. ಬಿ. ಸದಾಶಿವಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಕಿರ್ಲೋಸ್ಕರ್ ಕಾರ್ಮಿಕ ಸಂಘದ ಕಾರ್ಯದರ್ಶಿ ಕಾಂ. ಎನ್. ಜಿ. ಪಠಾಣ, ಕಾರ್ಮಿಕ ಮುಖಂಡ ಕಾಂ. ಡಿ. ಜಿ. ಜೋಷಿ ಸಹಾ ಮಾತನಾಡಿದರು. ಘೋಷಣೆಗಳೊಂದಿಗೆ ಸಭೆ ಮುಕ್ತಾಯವಾಯಿತು.

(ಇನ್ನೂ ಹಲವೆಡೆಗಳಿಂದ ಈಗ ತಾನೆ ವರದಿಗಳು ಬಂದಿರುತ್ತವೆ. ಇವುಗಳನ್ನು ಮುಂದಿನವಾರ ಪ್ರಕಟಿಸಲಾಗುವುದು).

ಸಂಪಾದಕೀಯ

(ಒಂದನೇ ಪುಟದಿಂದ)

ವನ್ನು ಮುರಿಯಲು ಯಾವ ಸರಕಾರದಿಂದಲೂ ಸಾಧ್ಯವಿಲ್ಲವೆಂದು ಕಾರ್ಮಿಕರು ತೋರಿಸಿದ್ದಾರೆ.

ಕಾರ್ಮಿಕರ ಮೂಲಭೂತ ಹಕ್ಕಿಗೆ ಚ್ಯುತಿತರುವ ಈ ಮಸೂದೆಯನ್ನು ವಾಪಸ್ ತೆಗೆದುಕೊಳ್ಳುವಂತೆ ನಾವು ಒತ್ತಾಯಪಡಿಸುತ್ತೇವೆ. ನಮ್ಮ ರಾಜ್ಯದ ಎಲ್ಲ ಕಾರ್ಮಿಕ ಸಂಘಟನೆಗಳೂ ಕೂಡಲೇ ಇದರ ಬಗ್ಗೆ ಕ್ರಮ ತೆಗೆದುಕೊಂಡು ಸರಕಾರ ಇದನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯ ತರುವರೆಂದು ನಂಬಿದ್ದೇವೆ. ಕಾರ್ಮಿಕರನ್ನು ದಮನ ಮಾಡುವ ಈಗಿರುವ ಶಾಸನಗಳೇ ಸಾಕಾಗಿವೆ, ಈ ಹೊಸ ಕರಾಳ ಶಾಸನ ನಮಗೆ ಬೇಡವೆಂಬ ಘೋಷಣೆ ಮೊಳಗಲಿ. ●

ಸಿ. ಐ. ಟಿ. ಯು. ರಾಜ್ಯಸಮಿತಿಯ ಸದಸ್ಯರ ಗಮನಕ್ಕೆ

ಸಿ. ಐ. ಟಿ. ಯು. ಕರ್ನಾಟಕ ರಾಜ್ಯಸಮಿತಿಯ ಸಭೆಯು ತಾ. 15-5-1980 ರಂದು ಗುರುವಾರ ಬೆಳಿಗ್ಗೆ 10 ಗಂಟೆಗೆ ಹರಿಹರದಲ್ಲಿ ಪ್ರಾರಂಭವಾಗುತ್ತದೆ. ಸದಸ್ಯರು ಸಕಾಲದಲ್ಲಿ ಹರಿಹರವನ್ನು ತಲುಪಿ ಸಭೆಯಲ್ಲಿ ಭಾಗವಹಿಸಬೇಕು. ಸಭೆಯ ನೋಟೀಸನ್ನು ತಾ. 6 ರಂದು ಎಲ್ಲರಿಗೂ ಅಂಚೆಯ ಮೂಲಕ ರವಾನಿಸಲಾಗಿದೆ.

ಸಿ. ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ
ಸಿ. ಐ. ಟಿ. ಯು. ಕರ್ನಾಟಕ ರಾಜ್ಯಸಮಿತಿ

ಬೆಂಗಳೂರು
8-5-80

ಕಾಂ. ಟಿಟೋ ನಿಧನಕ್ಕೆ ಸಂತಾಪ

ಸಮಾಜವಾದಿ ಯುಗೋಸ್ಲಾವಿಯಾದ ಅಧ್ಯಕ್ಷ, ಯುಗೋಸ್ಲಾವಿಯಾದ ಲೀಗ್ ಆಫ್ ಕಮ್ಯುನಿಸ್ಟ್‌ನ ಅಧ್ಯಕ್ಷ, ಹಾಗೂ ಯುಗೋಸ್ಲಾವಿಯಾದ ದುಡಿಯುವ ಜನತೆಯ ಸಮಾಜವಾದಿ ಮೈತ್ರಿಕೂಟದ ಅಧ್ಯಕ್ಷರಾಗಿದ್ದ, ಕಮ್ಯುನಿಸ್ಟ್ ಚಳುವಳಿಯ ಒಬ್ಬ ಹಿರಿಯ ನೇತಾರ ಕಾಮ್ರೇಡ್ ಜೋಸೆಫ್ ಬ್ರೋಜ್ ಟಿಟೋರವರ ನಿಧನದ ಬಗ್ಗೆ ಶೋಕ ವ್ಯಕ್ತಪಡಿಸಿದ ಸಿ. ಪಿ. ಐ. (ಎಂ) ಪೊಲಿಟ್ ಬ್ಯೂರೋ ಅಲ್ಲಿಯ ಜನತೆಗೆ ಸಂತಾಪಸೂಚಕ ಸಂದೇಶವನ್ನು ಕಳುಹಿಸಿದೆ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT